ದಾನ ಮಾಡಿರಿ, ಆದರೆ ಅದರಿಂದ ಪ್ರತಿಫಲ ನಿರೀಕ್ಷಿಸಬೇಡಿ. ಅದು ತಾನಾಗಿಯೇ ವಾಪಸ್ ಬರಲಿದೆ
–ಸ್ವಾಮಿ ವಿವೇಕಾನಂದ

# ಬೀದರವಾಣಿ

ಬೀದರ ಜಿಲ್ಲೆಯ ನಿರ್ಭಯ, ನಿಷ್ಪಕ್ಷಪಾತ ಏಕೈಕ ಅಂತರಜಾಲ(Online)

ಸಂಪಾದಕರು:ಸಿದ್ರಾಮಯ್ಯ ಸ್ವಾಮಿ EDITOR:SIDRAMAYYA SWAMY

ಸೋತೆ ಎಂದು ನೀ ಮುಂದಿಟ್ಟ ಹೆಜ್ಜೆ ಹಿಂದಿಡಬೇಡ... ಏಕೆಂದರೆ... ಯಾರಿಗೆ ಗೊತ್ತು ಆ ಹೆಜ್ಜೆ ನಿನ್ನ ಇತಿಹಾಸವನೇ ಸೃಷ್ಟಿ ಮಾಡುವ ಹೆಜ್ಜೆಯಾಗಿರಬಹುದು...

bidarvani.com ಇ-ಪೇಪರ್bidarvani.online bidarvani bidarvani@gmail.com Whatsapp Contact:9148471077

KARKAN/77693/2019 ಸಂಪುಟ:08 ಸಂಚಿಕೆ:209 ದಿನಾಂಕ:19.11.2025 ಬುಧವಾರ ಪುಟ.4 ಬೆಲೆ:02 ರೂ ಮೊ.9945793175


## ನಶಾ ಮುಕ್ತ ಭಾರತ ಅಭಿಯಾನಕ್ಕೆ ಎಲ್ಲರೂ ಕೈಜೋಡಿಸೋಣ-ಅಬಕಾರಿ ಡಿಸಿ ರವಿಶಂಕರ



ಬೀದರ,ನ.18:ನಶಾ ಮುಕ್ತ ಭಾರತ ಅಭಿಯಾನಕ್ಕೆ ಎಲ್ಲರೂ ಕೈಜೋಡಿಸೋಣ ಎಂದು ಅಬಕಾರಿ ಇಲಾಖೆಯ ಡಿಸಿ ರವಿಶಂಕರ ಅವರು ತಿಳಿಸಿದರು.

ಅವರು ಮಂಗಳವಾರ ಜಿಲ್ಲಾಧಿಕಾರಿಗಳ ಕಚೇರಿಯಲ್ಲಿ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಹಾಗೂ ಜಿಲ್ಲಾ ವಿಕಲಚೇತನರ ಹಿರಿಯ ನಾಗರಿಕರ ಸಬಲೀಕರಣ ಇಲಾಖೆ ಇವರ ಸಂಯುಕ್ತಾಶ್ರಯದಲ್ಲಿ ಆಯೋಜಿಸಲಾಗಿದ್ದ ನಶಾ ಮುಕ್ತ ಭಾರತ ಅಭಿಯಾನ 5ನೇ ವಾರ್ಷಿಕೋತ್ಸವದ ಅಂಗವಾಗಿ ಜಿಲ್ಲಾ ಮಟ್ಟದ ಪ್ರತಿಜ್ಞೆ ವಿಧಿ ಕಾರ್ಯಕ್ರಮ ಉದ್ದೇಶಿಸಿ ಮಾತನಾಡಿದರು.

ಇಂದಿನ ಯುವ ಜನತೆ ದುಶ್ಚಟಗಳಿಗೆ ಹತ್ತಿರವಾಗುತ್ತಿದ್ದಾರೆ. ಆದ್ದರಿಂದ ಕೇಂದ್ರ ಸರ್ಕಾರ ದೇಶದಾದ್ಯಂತ ನಶಾ ಮುಕ್ತ ಭಾರತ ಅಭಿಯಾನ ಹಮ್ಮಿಕೊಂಡಿದೆ. ಭಾರತ ಒಂದು ಯುವ ರಾಷ್ಟ್ರವಾಗಿದ್ದು,

ರಾಷ್ಟ್ರ ನಿರ್ಮಾಣ ಮತ್ತು ಅಭಿವೃದ್ಧಿಯಲ್ಲಿ ಯುವಜನತೆಯ ಪಾತ್ರ ಬಹಳ ಮುಖ್ಯವಾಗಿದೆ. ಯುವ ಜನತೆ ಆರೋಗ್ಯ ಮತ್ತು ಸ್ವಾಸ್ಥ್ಯ ಜೀವನ ನಡೆಸಲು ಅನುವು ಮಾಡಿಕೊಡಬೇಕು ಎಂದರು.

ಇಂದು ಪಂಜಾಬ್‌ನ ಅಮೃತಸರನಲ್ಲಿ ಅಧಿಕೃತ ಕಾರ್ಯಕ್ರಮ ನಡೆಯುತ್ತಿದೆ. ಇತ್ತೀಚೆಗೆ ಗುಜರಾತಿನ ಕರಾವಳಿಯಲ್ಲಿ ಬಹು ದೊಡ್ಡ ಮಟ್ಟದಲ್ಲಿ ಮಾದಕ ದ್ರವ್ಯವನ್ನು ವಶಪಡಿಸಿಕೊಳ್ಳಲಾಯಿತು.

ಬೇರೆ ದೇಶಗಳಿಂದ ನಮ್ಮ ದೇಶಕ್ಕೆ ಮಾದಕ ವಸ್ತುಗಳು ಆಮದು ಆಗುತ್ತಿದ್ದು, ಅವುಗಳನ್ನು ತಡೆದು ಭಾರತವನ್ನು ನಶಾ ಮುಕ್ತ ಮಾಡೋಣ ಎಂದರು.

ಜಿಲ್ಲಾ ವಿಕಲಚೇತನ ಕಲ್ಯಾಣಧಿಕಾರಿ ಸುಭಾಷ ರತ್ನಾ ಮಾತನಾಡಿ, ಗ್ರಾಮೀಣ ಮತ್ತು ನಗರ ಪ್ರದೇಶಗಳಲ್ಲಿ ಪುನರ್ವಸತಿ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದ್ದು, ನಶಾ ಮುಕ್ತ ಅಭಿಯಾನದ ಬಗ್ಗೆ ಸ್ಥಳೀಯ ಮಟ್ಟದಲ್ಲಿ ಹೆಚ್ಚು ಕಾರ್ಯಕ್ರಮ ಹಾಕಿಕೊಂಡು, ಅರಿವು ಮೂಡಿಸಲಾಗಿದೆ ಎಂದರು.

ಇದೇ ವೇಳೆ ನಶಾ ಮುಕ್ತ ಭಾರತ ಅಭಿಯಾನ ಅಂಗವಾಗಿ ಪ್ರತಿಜ್ಞೆ ವಿಧಿಯನ್ನು ಬೋಧಿಸಲಾಯಿತು.

ಈ ಸಂದರ್ಭದಲ್ಲಿ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ಸಹಾಯಕ ನಿರ್ದೇಶಕರಾದ ಮಂಜುನಾಥ ಸುಳ್ಳೊಳ್ಳಿ, ಸರ್ಕಾರಿ ಜುನಿಯರ್ ಕಾಲೇಜು ಅಧ್ಯಾಪಕರು ಮಲ್ಲಿಕಾರ್ಜುನ ಲದ್ದೆ ಸೇರಿದಂತೆ ಇತರೆ ಅಧಿಕಾರಿಗಳು ಉಪಸ್ಥಿತರಿದ್ದರು.

## ಮನ್ನಳ್ಳಿ-ಕುಂಬಾರವಾಡ ಮುಖ್ಯರಸ್ತೆಯಲ್ಲಿ ನವೆಂಬರ್ 25ರಂದು ರಾಸ್ತಾ ರೋಕೋ ಚಳುವಳಿ

ಬೀದರ.ನ.18:ಬೀದರ ನಗರದ ರಾಂಪೂರಿ ಕಾಲೋನಿಯ ಜೈ ಹನುಮಾನ್ ಸಂಘದ ಹಿರಿಯ ನಾಗರಿಕರು ನವೆಂಬರ್ 25ರಂದು ಮನ್ನಳ್ಳಿ ಕುಂಬಾರವಾಡ ಮುಖ್ಯ ರಸ್ತೆಯಲ್ಲಿ ರಾಸ್ತಾ ರೋಕೋ ಚಳುವಳಿ ನಡೆಸುವುದಾಗಿ ಘೋಷಿಸಿದ್ದಾರೆ. ರಾಂಪುರೆ ಕಾಲೋನಿಯ 36/13 ಮತ್ತು 36/14 ಸರ್ವೇ ನಂಬರಲ್ಲಿ ಇರುವ ಡಾ. ಬಿ.ಆರ್. ಅಂಬೇಡ್ಕರ್ ಉದ್ಯಾನ ಹಲವು ವರ್ಷಗಳಿಂದ ನಿರ್ಲಕ್ಷ್ಯಗೊಂಡಿದೆ. ಉದ್ಯಾನವನ್ನು ಅಭಿವೃದ್ಧಿಪಡಿಸುವ ಕುರಿತು ಸಂಬಂಧಿತ ಸರ್ಕಾರಿ ಇಲಾಖೆಗೆ ಹಲವು ಬಾರಿ ಪತ್ರ ಬರೆದರೂ ಕ್ರಮ ಕೈಗೊಳ್ಳದಿರುವುದು ಹಿರಿಯ ನಾಗರಿಕರ ಆಕ್ರೋಶಕ್ಕೆ ಕಾರಣವಾಗಿದೆ.


## ಕಾಂಗ್ರೆಸ್‌ಗೆ ರಾಹುಲ್ ಭಂಗೂರೆ ನೇಮಕ

ಬೀದರ್.ನ.18:ಕಾಂಗ್ರೆಸ್ ಪರಿಶಿಷ್ಟ ಜಾತಿ ವಿಭಾಗದ ಜಿಲ್ಲಾ ಘಟಕದ ಕಾರ್ಯದರ್ಶಿಯಾಗಿ ತಾಲ್ಲೂಕಿನ ತಡಪಳ್ಳಿ ಗ್ರಾಮದ ರಾಹುಲ್ ಫಾಳೆಪ್ಪ ಭಂಗೂರೆ ಅವರನ್ನು ನೇಮಕ ಮಾಡಲಾಗಿದೆ.

ಜಿಲ್ಲಾ ಉಸ್ತುವಾರಿ ಸಚಿವ ಈಶ್ವರ ಖಂಡ್ರೆ ಹಾಗೂ ಮಾಜಿ ಶಾಸಕ ಅಶೋಕ್ ಖೇಣಿ ಅವರ ಒಪ್ಪಿಗೆ ಮೇರೆಗೆ ಪಕ್ಷದ ಪರಿಶಿಷ್ಟ ಜಾತಿ ವಿಭಾಗದ ಜಿಲ್ಲಾ ಘಟಕದ ಅಧ್ಯಕ್ಷ ಸಂಜುಕುಮಾರ ಡಿ. ಕುರನಳ್ಳಿಕರ್ ಈ ನೇಮಕ ಮಾಡಿ ಆದೇಶ ಹೊರಡಿಸಿದ್ದಾರೆ.

ಪಕ್ಷದ ತತ್ವ, ಸಿದ್ಧಾಂತಕ್ಕೆ ಅನುಗುಣವಾಗಿ ಕಾರ್ಯ ನಿರ್ವಹಿಸುವಂತೆ ಅವರು ಸೂಚಿಸಿದ್ದಾರೆ.ನೇಮಕಾತಿ ಪತ್ರ ವಿತರಣೆ: ಕಾಂಗ್ರೆಸ್ ಪರಿಶಿಷ್ಟ ಜಾತಿ ವಿಭಾಗದ ಜಿಲ್ಲಾ ಘಟಕದ ನೂತನ ಕಾರ್ಯದರ್ಶಿ ರಾಹುಲ್ ಭಂಗೂರೆ ಅವರಿಗೆ ಜಿಲ್ಲಾ ಉಸ್ತುವಾರಿ ಸಚಿವ ಈಶ್ವರ ಖಂಡ್ರೆ ಅವರು ನಗರದಲ್ಲಿ ನೇಮಕಾತಿ ಪತ್ರ ವಿತರಿಸಿದರು.

ಕಾಂಗ್ರೆಸ್ ಜಿಲ್ಲಾ ಘಟಕದ ಪ್ರಧಾನ ಕಾರ್ಯದರ್ಶಿ ವಿನೋದಕುಮಾರ ಅಪ್ಪೆ, ವಿಭಾಗದ ಜಿಲ್ಲಾ ಘಟಕದ ಅಧ್ಯಕ್ಷ ಸಂಜುಕುಮಾರ ಡಿ.ಕೆ. ಮತ್ತಿತರರು ಇದ್ದರು.



## ಕರೋನಾ ನಂತರ ಸ್ಥಗಿತಗೊಂಡ ಮನ್ನಾಏಖೇಳ್ಳಿ-ಹಳ್ಳಿಖೇಡ ಬಸ್ ಮಾರ್ಗ ಪುನರಾರಂಭಕ್ಕೆ ಸಾರ್ವಜನಿಕರಿಂದ ಮನವಿ



ಬೀದರ.ನ.18:ಕರೋನಾ ಮಹಾಮಾರಿ ಸಮಯದಲ್ಲಿ ಸ್ಥಗಿತಗೊಂಡಿದ್ದ ಮನ್ನಾಏಖೇಳ್ಳಿಯಿಂದ ಹಳ್ಳಿಖೇಡವರೆಗೆ (ವಾಂಜರಾ-ಬಗದಲ್, ಭೈರನಳ್ಳಿ, ಔರಾದ (ಎಸ್), ಸಿರ್ಸಿ (ಎ),ಬಾವಗಿ, ಸಂಗೊಳಗಿ, ಹಾಲಹಳ್ಳಿ) ಸಂಚರಿಸುವ ಬಸ್ ಸೌಕರ್ಯವನ್ನು ಸಾರ್ವಜನಿಕರು ಮತ್ತು ವಿದ್ಯಾರ್ಥಿಗಳ ಸವಾಲಿನ ಪರಿಸ್ಥಿತಿಯನ್ನು ಪರಿಗಣಿಸಿ ತಕ್ಷಣ ಪುನರಾರಂಭಿಸುವಂತೆ ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆಯ (KKRTC) ಬೀದರ ವಿಭಾಗೀಯ ನಿಯಂತ್ರಣಾಧಿಕಾರಿಗಳಿಗೆ ಮನವಿ ಸಲ್ಲಿಸಲಾಗಿದೆ.

ಕಾರಂಜಾ ಜಲಾಶಯದ ಸುತ್ತಮುತ್ತ ಇರುವ ಅನೇಕ ಹಳ್ಳಿಗಳು ಭಾಲ್ಕಿ, ಬೀದರ ಮತ್ತು ಚಿಟಗುಪ್ಪಾ ತಾಲೂಕುಗಳಿಗೆ ತಲುಪಲು ಸರಿಯಾದ ಸಾರಿಗೆ ವ್ಯವಸ್ಥೆ ಇಲ್ಲದೆ ತೊಂದರೆ ಅನುಭವಿಸುತ್ತಿವೆ. ವಿಶೇಷವಾಗಿ ಸಿರ್ಸಿ (ಎ), ಬಾವಗಿ, ನೆಲವಾಡ, ಸಂಗೋಳಗಿ ಸೇರಿದಂತೆ ಹಲವು ಹಳ್ಳಿಗಳ ವಿದ್ಯಾರ್ಥಿಗಳು ಪ್ರತಿದಿನ 10-15 ಕಿ.ಮೀ ದೂರದ ಹಾಲಹಳ್ಳಿ ಮತ್ತು ಹಳ್ಳಿಖೇಡ (ಬಿ) ಕೇಂದ್ರಗಳಿಗೆ ಖಾಸಗಿ ವಾಹನಗಳಲ್ಲಿ ಸಂಚರಿಸುತ್ತಿದ್ದು, ಇದರಿಂದ ಆರ್ಥಿಕವಾಗಿ ಭಾರವಾಗುತ್ತಿದೆ.

ಮಾರ್ಗದ ಮೇಲೆ ಬಸ್‌ನ್ನು ಪುನಃ ಚಲಾಯಿಸಿದರೆ:ಭಾಲ್ಕಿ, ಹುಮನಾಬಾದ, ಚಿಟಗುಪ್ಪಾ ತಾಲೂಕುಗಳಿಗೆ ಸಾರ್ವಜನಿಕ ಸಂಚಾರ ಸುಲಭವಾಗುತ್ತದೆ. ಹಾಲಹಳ್ಳಿಯ ಸ್ನಾತಕೋತ್ತರ ಮಹಾವಿದ್ಯಾಲಯ, ಬಸವೇಶ್ವರ ಪ್ರೌಢ & ಪಿ.ಯು. ಕಾಲೇಜುಗಳಿಗೆ ವಿದ್ಯಾರ್ಥಿಗಳ ಪ್ರವೇಶ ಸುಗಮವಾಗುತ್ತದೆ.ಹಳ್ಳಿಗಳ ನಡುವೆ ಸಾಮಾಜಿಕ ಹಾಗೂ ಆರ್ಥಿಕ ಸಂಪರ್ಕ ಸುಧಾರಿಸುತ್ತದೆ.ಈ ಹಿನ್ನೆಲೆಯಲ್ಲಿ ಬಸ್ ಸೌಕರ್ಯವನ್ನು ತಕ್ಷಣ ಪುನಾರಂಭಿಸುವಂತೆ ಲಿಖಿತ ಮನವಿ ಸಲ್ಲಿಸಲಾಗಿದೆ ಎಂದು ಜಿಲ್ಲಾ ಟೋಕರೆ ಕೋಳಿ ಸಮಾಜ ಸಂಘದ ಪ್ರಧಾನ ಕಾರ್ಯದರ್ಶಿ ಮಾರುತಿ ಮಾಸ್ಟರ್ ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಮನವಿ ಸಲ್ಲಿಸುವ ಸಂದರ್ಭದಲ್ಲಿ ಯುವ ಮುಖಂಡರಾದ ಶರಣಪ್ಪಾ ಅಣ್ಣಾಜಿ, ವಿಠಲ್ ಜಾಣ, ಸಂಜು ಶಿರ್ಷೆ ಹಾಗೂ ಅನೇಕರು ಉಪಸ್ಥಿತರಿದ್ದರು ಎಂದು ಅವರು ತಿಳಿಸಿದ್ದಾರೆ.

## ಉದ್ದಿಮೆದಾರರು ಭಾಗವಹಿಸಲು ಮನವಿ

ಬೀದರ,ನ.18:ಜಿಲ್ಲಾ ಕೈಗಾರಿಕಾ ಕೇಂದ್ರ ಬೀದರ ವತಿಯಿಂದ ಜಿಲ್ಲೆಯ ಕೈಗಾರಿಕಾ ಉದ್ದಿಮೆದಾರರಿಗೆ ಅನುಕೂಲವಾಗುವಂತೆ RAMP ಯೋಜನೆಯಡಿ ಖಖಜಆಖ, ಇಖಒ ಚಿಟಿಜ ಃಆಖಕ ಅರಿವು ಮೂಡಿಸುವ ಕಾರ್ಯಕ್ರಮಗಳನ್ನು ಸಹಾರ್ದಾ ತರಬೇತಿ ಸಂಸ್ಥೆ, ನೌಬಾದ್ ಬೀದರದಲ್ಲಿ ದಿನಾಂಕ: 19-11-2025 ರಂದು ಬೆಳಿಗ್ಗೆ 11 ಗಂಟೆಗೆ ಖಖಜಆಖ, ಇಖಒ ಹಾಗೂ ದಿನಾಂಕ: 20-11-2025 ರಂದು ಬೆಳಿಗ್ಗೆ 11 ಗಂಟೆಗೆ ಃಆಖಕ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ. ಆಸಕ್ತಿವುಳ್ಳ ಉದ್ದಿಮೆದಾರರು ಕಾರ್ಯಕ್ರಮಗಳಲ್ಲಿ ಭಾಗವಹಿಸಿ ಮಾಹಿತಿ ಪಡೆದುಕೊಳ್ಳಬೇಕೆಂದು ಬೀದರ ಜಿಲ್ಲಾ ಕೈಗಾರಿಕಾ ಕೇಂದ್ರದ ಜಂಟಿ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಆತ್ಮನಿರ್ಭರ ಭಾರತ ನಿರ್ಮಾಣದಲ್ಲಿ ಸಹಕಾರಿಗಳೇ ಪ್ರಮುಖ ವಾಹಕರು-ಗುರುನಾಥ ಜಾಂತಿಕರ

ಬೀದರ.ನ.18: ಹುಮನಾಬಾದ್‌ದಲ್ಲಿ 72ನೇ ಅಖಿಲ ಭಾರತ ಸಹಕಾರ ಸಪ್ತಾಹಾಚರಣೆಯ ಅಂಗವಾಗಿ, ವೀರಭದ್ರೇಶ್ವರ ಚಿತ್ರಕಲಾ ಮಹಾವಿದ್ಯಾಲಯದಲ್ಲಿ ವಿಶೇಷ ಕಾರ್ಯಕ್ರಮ ಜರುಗಿತು. ಕಾರ್ಯಕ್ರಮವನ್ನು ಉದ್ಘಾಟಿಸಿದ ಕರ್ನಾಟಕ ರಾಜ್ಯ ಬಸವೇಶ್ವರ ಸುದ್ದಿ ಮಾಧ್ಯಮ ಮಹಾಮಂಡಲದ ಅಧ್ಯಕ್ಷರು ಹಾಗೂ ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು- ಇವರ ನಿರ್ದೇಶಕರಾದ ಶ್ರೀ ಗುರುನಾಥ ಜಾಂತಿಕರ ಮಾತನಾಡಿ, "ಅಮೂಲ್, ಕೆಎಂಎಫ್, ಪ್ಯಾಕ್ಸ್ ಸೇರಿದಂತೆ ಎಲ್ಲಾ ಸಹಕಾರಿ ವ್ಯವಸ್ಥೆಗಳು ಆತ್ಮನಿರ್ಭರ ಭಾರತದ ನಿರ್ಮಾಣದಲ್ಲಿ ನಿರ್ಣಾಯಕ ಶಕ್ತಿಯಾಗಿ ಕೆಲಸ ಮಾಡುತ್ತಿವೆ.ಸಹಕಾರ ಚಳವಳಿಯನ್ನು ಇನ್ನಷ್ಟು ಗಟ್ಟಿಗೊಳಿಸಲು ಎಲ್ಲರೂ ಜವಾಬ್ದಾರಿಯಿಂದ ಶ್ರಮಿಸಬೇಕು," ಎಂದು ಕರೆ ನೀಡಿದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಜಿಲ್ಲಾ ಸಹಕಾರಿ ಯೂನಿಯನ್ ನಿರ್ದೇಶಕರಾದ ಶ್ರೀ ಮಲ್ಲಿಕಾರ್ಜುನ ಪಾಂಚಾಳ ವಹಿಸಿದ್ದರು.ಧ್ವಜಾರೋಹಣವನ್ನು ಬೀದರ್ ಜಿಲ್ಲಾ ಸೌಹಾರ್ದ ಸಹಕಾರಿಗಳ ಒಕ್ಕೂಟ ನಿ. ನಿರ್ದೇಶಕರಾದ ಶ್ರೀ ಸೂರ್ಯಕಾಂತ ಮಠಪತಿ ನೆರವೇರಿಸಿದರು.

ಬೀದರ್ ಜಿಲ್ಲಾ ಸೌಹಾರ್ದ ಸಹಕಾರಿಗಳ ಒಕ್ಕೂಟದ ವತಿಯಿಂದ ರಾಜ್ಯಮಟ್ಟದ 'ಸಹಕಾರ ರತ್ನ' ಪ್ರಶಸ್ತಿ ಪಡೆದ ಶ್ರೀ ವೀರೇಶ ತೂಗಾಂವ ಅವರನ್ನು ಸನ್ಮಾನಿಸಲಾಯಿತು. ಇವೇ ಸಂದರ್ಭದಲ್ಲಿ ಜಿಲ್ಲಾ ಮಟ್ಟದ 'ಶ್ರೇಷ್ಠ ಸಹಕಾರಿ ಪ್ರಶಸ್ತಿ' ಅನ್ನು ಶರಣ ಕಿನ್ನಾರಿ ಬೊಮ್ಮಯ್ಯ ಸೌಹಾರ್ದ ಸಹಕಾರಿ ನಿ. ಅಧ್ಯಕ್ಷರಾದ ಶ್ರೀ ಅಣ್ಣಪ್ಪ ರಟಕಲೆ ಅವರಿಗೂ ಪ್ರದಾನ ಮಾಡಲಾಯಿತು.ಕಾರ್ಯಕ್ರಮದ ನಂತರ, ಕಲಬುರ್ಗಿ ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ಸೂರ್ಯಕಾಂತ ರಾಖಲೆ ಅವರು "ಸಹಕಾರಿ ಉದ್ಯಮಶೀಲತೆಯಿಂದ ಯುವಕರ, ಮಹಿಳೆಯರ ಹಾಗೂ ಅಬಲ ವರ್ಗದ ಸಬಲೀಕರಣ" ಕುರಿತು ಉಪನ್ಯಾಸ ನೀಡಿದರು.

ಕಾರ್ಯಕ್ರಮಕ್ಕೆ ಜಿಲ್ಲಾ ಸಹಕಾರಿಗಳ ಉಪನಿಬಂಧಕಿ ಶ್ರೀಮತಿ ಮಂಜುಳಾ ಎಸ್, ಸೌಹಾರ್ದ ಒಕ್ಕೂಟ ಉಪಾಧ್ಯಕ್ಷ ಶ್ರೀ ಸಂಜೀವಕುಮಾರ ಪಾಟೀಲ್, ನಿರ್ದೇಶಕರಾದ ಶ್ರೀ ರಾಜಶೇಖರ್ ನಾಗಮೂರ್ತಿ, ಶ್ರೀ ಶಿವಬಸಪ್ಪ ಚೆನ್ನಮಲ್ಲೆ, ಶ್ರೀ ಸಂಜಯ ಕ್ಯಾಸ, ಶ್ರೀಕಾಂತ ಸ್ವಾಮಿ, ಶ್ರೀ ನಾಗಶೆಟ್ಟಿ ಪಾಟೀಲ್, ಶ್ರೀಮತಿ ಮಾಯಾದೇವಿ ಸಿಂಧನಕೇರಾ ಹಾಗೂ ಒಕ್ಕೂಟದ ಸಿಇಒ ಶ್ರೀ ಅಮೃತ ಹೊಸಮನಿ ಹಾಜರಿದ್ದರು. ಸ್ವಾಗತ ನುಡಿಯನ್ನು ಜಿಲ್ಲಾ ಸಹಕಾರಿ ಯೂನಿಯನ್ ಮುಖ್ಯ ಕಾರ್ಯನಿರ್ವಾಹಕಿ ಶ್ರೀಮತಿ ಮಲ್ಲಮ್ಮ ಊ.ಖ. ನೀಡಿದರು. ಕಾರ್ಯಕ್ರಮ ನಿರೂಪಣೆಯನ್ನು ಶ್ರೀ ರಾಜೇಶ್ ಕೆ.ಎಮ್., ಸೌಹಾರ್ದ ಅಭಿವೃದ್ಧಿ ಅಧಿಕಾರಿ, ನೆರವೇರಿಸಿದರು.



# ಬ್ರಿಟಿಷ್ ಸಾಮ್ರಾಜ್ಯದ ವಿರುದ್ಧ ಹೋರಾಡಿದ ಬಿರ್ಸಾ ಮುಂಡಾ



ವಾಡಿ:ನ.18:ದೇಶದಲ್ಲಿನ ಅಸಮಾನತೆ ಹೋಗಲಾಡಿಸಲು, ಬುಡಕಟ್ಟು ಜನಾಂಗದ ಏಳಿಗೆ ಬಯಸಿದ್ದ ಬಿರ್ಸಾ ಮುಂಡಾ ಬ್ರಿಟಿಷ್ ರ ವಿರುದ್ಧ ಹೋರಾಡು ಮೂಲಕ ಶೋಷಿತರ ಸಮುದಾಯಕ್ಕೆ ಧ್ವನಿಯಾಗಿದ್ದರು ಎಂದು ಕಲಬುರಗಿ ಸಮಾಜ ಕಲ್ಯಾಣ ಇಲಾಖೆಯ ಜಂಟಿ ನಿರ್ದೇಶಕಿ ಪ್ರೀತಿ ಚಂದ್ರಶೇಖರ ದೊಡ್ಡಮನಿ ಹೇಳಿದರು.

ಸಮೀಪದ ಲಾಡ್ಲಾಪುರ ಗ್ರಾಪಂ ವ್ಯಾಪ್ತಿಯ ಡಿಗ್ಗಿ ತಾಂಡಾ ಪ್ರದೇಶದಲ್ಲಿರುವ ಏಕಲವ್ಯ ಮಾದರಿ ವಸತಿ ಶಾಲಾ ಆವರಣದಲ್ಲಿ ಬುಡಕಟ್ಟು ಜನಾಂಗದ ನಾಯಕ ಬಿರ್ಸಾ ಮುಂಡಾ ಅವರ ಜಯಂತಿ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು. 19ನೇ ಶತಮಾನದ ಬುಡಕಟ್ಟು ಸಮುದಾಯದ ನಾಯಕ ಬಿರ್ಸಾ ಮುಂಡಾ ಅವರ ಕೊಡುಗೆ ನಮ್ಮ ದೇಶಕ್ಕೆ ಅಪಾರವಾಗಿದೆ. ನಮ್ಮ ನೆಲದ ಸಂಸ್ಕೃತಿ, ದೇಶದ ಭವಿಷ್ಯ ಕಾಪಾಡುವ ನಿಟ್ಟಿನಲ್ಲಿ ಅವರು ಬ್ರಿಟಿಷ್ ಸಾಮ್ರಾಜ್ಯದ ವಿರುದ್ಧ ಹೋರಾಟ ನಡೆಸಿದ್ದರು. ಶೋಷಿತ ಸಮುದಾಯಗಳ ಮೇಲೆ ನಡೆಯುವ ಘೋರ ಅನ್ಯಾಯವನ್ನು ಅವರು ಮೆಟ್ಟಿ ನಿಲ್ಲುತ್ತಿದ್ದರು ಎಂದು ಹೇಳಿದರು.

ಏಕಲವ್ಯ ಮಾದರಿ ವಸತಿ ಶಾಲೆಯ ಪ್ರಾಂಶುಪಾಲ ಸುನಿಲ್ ಕುಮಾರ್ ಬಾಲರ್ ಮಾತನಾಡಿ, ಕಾಡಿನಲ್ಲಿ ನೆಲೆಸುವ ಬುಡಕಟ್ಟು ಜನಾಂಗಕ್ಕೆ ಬಿರ್ಸಾ ಮುಂಡಾ ಅವರು ಬೆನ್ನೆಲುಬಾಗಿ ನಿಲ್ಲುತ್ತಿದ್ದರು. ಆಗ ಬಿರ್ಸಾನಿಗೆ 13 ವರ್ಷ ವಯಸ್ಸೂ ಆಗಿರಲಿಲ್ಲ. ಧರ್ಮ ಪ್ರಚಾರಕರು ತಮ್ಮ ಧರ್ಮದ ಶ್ರೇಷ್ಠತೆಯನ್ನು ಕೊಂಡಾಡುತ್ತಲೇ ಆದಿವಾಸಿಗಳ ಸಂಸ್ಕೃತಿಯನ್ನು ಬಿಂಬಿಸುವ ಕೆಲಸ ಅವರು ಮಾಡಿದ್ದರು.ಮತ್ತೊಂದೆಡೆ ಬಿಳಿಯರ ಕಾನೂನುಗಳು ಮತ್ತು ವ್ಯಾಪಾರಸ್ಥರ ಕಪಟತನಗಳ ನಡುವೆ ತನ್ನ ಜನ ತಮ್ಮ ಭೂಮಿಗಳನ್ನು ಕಳೆದುಕೊಂಡು ದಿನಗೂಲಿ ಗಳಾಗುತ್ತಿರುವುದನ್ನು ನೋಡಿ ಆತ ಆತಂಕ ಗೊಂಡಿದ್ದ. ಇಂಥಹ ದಿನಗಳಲ್ಲೇ ಬ್ರಿಟಿ ಷರ ವಿರುದ್ಧ ಆದಿವಾಸಿಗಳುದಂಗೆ ಏಳಲಾರಂಭಿಸಿದ್ದರು. ವಿದ್ಯಾರ್ಥಿಗಳು ಸಹ ಈ ದೇಶಕ್ಕಾಗಿ ಮಡಿದಿರುವ ಮಹಾನ್ ನಾಯಕರ ಜೀವನ ಚರಿತ್ರೆಗಳನ್ನು ಪರಿಚಯಿಸಿಕೊಳ್ಳಬೇಕು ಎಂದು ಹೇಳಿ ದರು. ವಸತಿ ಶಾಲೆಯ ಶಿಕ್ಷಕರು, ವಿದ್ಯಾರ್ಥಿಗಳು ಹಾಗೂ ಪೋಷಕರು ಪಾಲ್ಗೊಂಡಿದ್ದರು

# ಕಿವುಡ–ಮೂಗ ಕಲಾವಿದರ ಮೌನ ಭಾಷೆಯ 'ಕಡ್ಲಿಮಟ್ಟಿ ಕಾಶೀಬಾಯಿ' ನಾಟಕ

ಬಳ್ಳಾರಿ,ನ.18:ಈ ನಟರೆಲ್ಲಾ ವಿಶೇಷ ಚೇತನರು. ತಮ್ಮಲ್ಲಿರುವ ಕೊರತೆಯನ್ನು ನಿರ್ಲಕ್ಷಿಸಿ ಸಮಾಜದ ಮೇಲ್ಪಂಕ್ತಿಯಲ್ಲಿ ಸದಾಕಾಲ ಕಾಣಿಸಿಕೊಳ್ಳಲು ನಿರಂತರ ಪ್ರಯತ್ನಿಸುತ್ತಿರುವವರ ತಂಡ. ಇವರೆಲ್ಲರೂ ಕಿವುಡರು □ ಮೂಗರು. ಕೇವಲ ಸಂಜ್ಞೆಗಳ ಮೂಲಕವೇ ಪ್ರೇಕ್ಷಕರ ಮನಮೆಚ್ಚುವ ರೀತಿಯಲ್ಲಿ ಅಭಿನಯ ಮಾಡುತ್ತಾರೆ.

ಗದಗ ಜಿಲ್ಲೆಯ ಗಜೇಂದ್ರಗಡದ ನರೇಗಲ್ಲು ಗ್ರಾಮದಲ್ಲಿರುವ ಶ್ರೀ ಅನ್ನದಾನ ವಿಜಯ ವಿದ್ಯಾ ಪ್ರಸಾರಕ ಸಮಿತಿಯ ಕಿವುಡ ಮಕ್ಕಳ ವಸತಿಯುತ ಪ್ರಾಥಮಿಕ ಮತ್ತು ಪ್ರೌಢಶಾಲೆಯ ವಿದ್ಯಾರ್ಥಿಗಳ ಕಲಾಶ್ರೀಮಂತಿಕೆಯ ಮಾತುಗಳು.ಈ ವಿದ್ಯಾರ್ಥಿಗಳು 'ಕಡ್ಲಿಮಟ್ಟಿ ಕಾಶೀಬಾಯಿ' ಜನಪದ ಕಥವನ್ನು ನಾಟಕ ರೂಪದಲ್ಲಿ ಬಳ್ಳಾರಿಯ ಶ್ರೀ ಕೊಟ್ಟೂರುಸ್ವಾಮಿ ಮಠದಲ್ಲಿ ಪ್ರದರ್ಶನ ಮಾಡಿದ್ದು, ಆರ್.ಕೆ. ಬಾಗವಾನ್ ಅವರು ಪರಿಕಲ್ಪನೆ ಮತ್ತು ವಿನ್ಯಾಸ ರೂಪುಗೊಳಿಸಿದ್ದಾರೆ. ಶ್ರೀಕಾಂತ ನವಲಗರಿ ಅವರು ನಿರ್ದೇಶನ ಮಾಡಿದ್ದಾರೆ. ಎಸ್.ಎ. ಅರಮನಿ ಅವರು ತಂಡದ ಸಂಚಾಲಕತ್ವರಾಗಿದ್ದಾರೆ.

ಪ್ರತಿ ಮಗುವಿನಲ್ಲೂ ಕಲಿಕೆಯ ಧ್ಯಾನವಿದೆ. ಮನಸ್ಸಿನ ತುಡಿತಕ್ಕೆ ಪೂರಕ ಮೌನದ ಪ್ರತಿಕ್ರಿಯೆ ಇದೆ. ಲಿಂಗೈಕ್ಯ ಡಾ. ಅಭಿನವ ಅನ್ನದಾನ ಮಹಾಸ್ವಾಮಿಗಳ ಪ್ರೇರಣಾ ಶಕ್ತಿಯು ಇವರಲ್ಲಿ ಸದಾಕಾಲ ಸ್ಫೂರ್ತಿ ತಂದು, ಸದಾಕಾಲ ಕ್ರಿಯಾಶೀಲ, ಸೃಜನಶೀಲರನ್ನಾಗಿ ಇವರ ಉತ್ಸಾಹವನ್ನು ಕಾಪಾಡುತ್ತಿದೆ ಎನ್ನುತ್ತಾರೆ ಆರ್.ಕೆ. ಬಾಗವಾನ್.

ಜಗದ್ಗುರು ಕೊಟ್ಟೂರು ಬಸವಲಿಂಗ ಮಹಾಸ್ವಾಮಿಗಳು,ಅತ್ಯಾಚಾರ □ ಅಪರಾಧ ಪ್ರಜ್ಞೆ ಹೆಚ್ಚುತ್ತಿರುವ ಈ ದಿನಗಳಲ್ಲಿ 'ಕಡ್ಲಿಮಟ್ಟಿ ಕಾಶೀಬಾಯಿ' ಜನಪದ ನಾಟಕದ ಮೂಲಕ ಮಹಿಳೆಯ ಚಾರಿತ್ರ್ಯೆಗೆ ಇರುವ ಮಹತ್ವದ ಕುರಿತು ಕಿವುಡ ಮತ್ತು ಮೂಗ ವಿದ್ಯಾರ್ಥಿಗಳು ಮನಮೋಹಕವಾಗಿ ಅಭಿನಯಿಸಿದ್ದಾರೆ. ಕಿವುಡ ಮತ್ತು ಮೂಗರಿಂದ ನಾಟಕ ಮಾಡಿಸುವ ಸವಾಲನ್ನು ಯಶಸ್ವಿಗೊಳಿಸಿದ್ದಾರೆ ಎಂದರು.

ಕಾಶೀಬಾಯಿ, ಆಕೆಯ ಪತಿ, ತಂದೆ, ವ್ಯಾಪಾರಿ, ರೈಲ್ವೆ ಸ್ಟೇಷನ್ ಮಾಸ್ಟರ್ ಹೀಗೇ ಪ್ರತಿ ಪಾತ್ರದಲ್ಲೂ ಮಕ್ಕಳ ಅಭಿಯನವು ಪ್ರೇಕ್ಷಕರನ್ನು ಹಿಡಿದಿಟ್ಟುಕೊಂಡಿತ್ತು. ಪಾತ್ರದಾರಿಗಳ ಜೊತೆಯಲ್ಲಿ ಪ್ರೇಕ್ಷಕರೂ ಪಾತ್ರಗಳಲ್ಲಿ ತಲ್ಲೀನರಾಗಿದ್ದು ಕಲಾವಿದರ 'ಮೌನ ಭಾಷೆ'ಯ ಅಭಿನಯದ ಕೌಶಲ್ಯಗಳನ್ನು ಪ್ರತಿನಿಧಿಸುತ್ತಿದ್ದುದ್ದು ವಿಶೇಷ.

ಹಿರಿಯ ವಕೀಲರಾದ ಅಯ್ಯಪ್ಪ, ದಾನಿಗಳಾದ ಸಂಗನಕಲ್ಲು ಚನ್ನನಗೌಡ ದಂಪತಿಗಳು, 'ಕಿವುಡ □ ಮೂಗರ ಅಭಿನಯದಲ್ಲಿ ದೇಹಭಾಷೆ, ಸಂಜ್ಞೆಗಳು ಮತ್ತು ವೇಷಭೂಷಣಗಳು ಅತ್ಯುತ್ತಮವಾಗಿ ರೂಪುಗೊಂಡಿವೆ. ತಂಡದ ಪ್ರತಿ ಕಲಾವಿದರೂ ಅತ್ಯುತ್ತಮವಾಗಿಯೇ ಅಭಿನಯಿಸಿದ್ದಾರೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.



# ಮನಸ್ಸಿನ ನಿರಂತರ ವಿಚಲಿತವೇ ಚಿಂತನಾರ್ಹ : ಕೊಟ್ಟೂರು ಬಸವಲಿಂಗ ಮಹಾಸ್ವಾಮಿಗಳು



ಬಳ್ಳಾರಿ,ನ.18:ಮನುಷ್ಯನ ಮನಸ್ಸು ಏತಕ್ಕಾಗಿ ನಿರಂತರ ವಿಚಲಿತಗೊಳ್ಳುತ್ತಿದೆ ಎನ್ನುವದೇ ಚಿಂತನಾರ್ಹ ಎಂದು ಜಗದ್ಗುರು ಕೊಟ್ಟೂರು ಬಸವಲಿಂಗ ಮಹಾಸ್ವಾಮಿಗಳು ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.

ಕೊಟ್ಟೂರುಸ್ವಾಮಿ ಮಠದಲ್ಲಿ ಸೋಮವಾರ ನಡೆದ ಶ್ರೀ ಕೊಟ್ಟೂರೇಶ್ವರ ಸ್ವಾಮಿಯ ಕಾರ್ತಿಕೋತ್ಸವ ಮತ್ತು ಶಿವಾನುಭವದಲ್ಲಿ ಶ್ರೀಗಳು ಆಶೀರ್ವಚನ ನೀಡಿದರು.

ಪ್ರಸ್ತುತ ದಿನಗಳಲ್ಲಿ ಪ್ರತಿಯೊಬ್ಬರ ಮನಸ್ಸು ತೀವ್ರವಾಗಿ ಚಂಚಲಗೊಳ್ಳುತ್ತಿದೆ. ಮನಸ್ಸಿನ ನಿರಂತರ ಚಂಚಲತೆಯ ಕುರಿತು ಪ್ರತಿಯೊಬ್ಬರೂ ಚಿಂತಿಸಬೇಕಾಗಿದೆ. ಮಹಾ ಶಿವ ಭಕ್ತ, ತಪಸ್ವಿ, ಶಿವನ ಆತ್ಮಲಿಂಗವನ್ನೇ ಪಡೆದಿದ್ದ ರಾವಣನು ಒಂದು ಕ್ಷಣದ ಮನಸ್ಸಿನ ಚಂಚಲತೆಯ ಕಾರಣ ತನ್ನೆಲ್ಲಾ ಸಾಮರ್ಥ್ಯವನ್ನು, ಶಕ್ತಿಯನ್ನು ಹಾಗೂ ತಪಸ್ಸಿನ ಪ್ರಭಾವವನ್ನು ಕಳೆದುಕೊಂಡು ವಿಭಿನ್ನವಾಗಿ ಗುರುತಿಸಿಕೊಳ್ಳಬೇಕಾಯಿತು. ಕಾರಣ ಪ್ರತಿಯೊಬ್ಬರೂ ಮನಸ್ಸಿನ ಆಸೆ ಆಮಿಷಗಳಿಗೆ ಬಲಿಯಾಗದೇ ಏಕಾಗ್ರತೆಯನ್ನು ಸಾಧಿಸಲು ನಿರಂತರ ಪ್ರಯತ್ನಿಸಬೇಕು ಎಂದರು.

ಕಾಲ ಮತ್ತು ಕರ್ಮ ಯಾರನ್ನೂ ಬಿಡುವುದಿಲ್ಲ. ಕಾಲದ ಪ್ರಭಾವಕ್ಕೆ ಪ್ರತಿಯೊಬ್ಬರೂ ಒಳಗಾಗಿದ್ದು, ಕರ್ಮದ ಪ್ರೇರಣೆಗೆ ಪ್ರತಿಯೊಬ್ಬರೂ ಸಿಲುಕಿದ್ದೇವೆ. ಪ್ರತಿಯೊಬ್ಬರೂ ಕಾಲ ಮತ್ತು ಕರ್ಮದ ವ್ಯಾಪ್ತಿಯಲ್ಲಿಯೇ ದಿನಗಳನ್ನು ಕಳೆಯಬೇಕಿದೆ. ನಮ್ಮೆಲ್ಲರ ಬದುಕು ಸಂತೋಷವಾಗಿಡಲು ನಾವು ಕಾಲದ ಜೊತೆಯಲ್ಲಿ ಸದ್ವಿಚಾರ, ಸಚ್ಚಾರಿತ್ರ್ಯ, ಸೇವೆ, ಮಾನವೀಯ ನೆರವುಗಳನ್ನು ಕೈಗೊಳ್ಳುವಲ್ಲಿ ಸದಾಕಾಲ ನಿರತರಾಗಬೇಕು ಎಂದರು.

ಶಿಕ್ಷಕಿ ಡಾ. ಕಲ್ಯಾಣಿ ವೈ. ಅವರು, ಅಕ್ಕಮಹಾದೇವಿಯ ವಚನಗಳಲ್ಲಿ ಸಾಮಾಜಿಕ ಚಿಂತನೆ' ವಿಷಯದ ಉಪನ್ಯಾಸ ನೀಡಿ, ಅನುಭವಮಂಟಪದ ಮೂಲಕ ಸಮಾಜದ ಅನೇಕ ಪ್ರಶ್ನೆಗಳಿಗೆ ಉತ್ತರ ನೀಡಿದ ಸಾಧ್ವಿ ಅಕ್ಕಮಹಾದೇವಿ ಅವರು, ವಚನಗಳ ಮೂಲಕ ಸಮಾಜಕ್ಕೆ ದಾರಿದೀಪವಾದರು. ಅಕ್ಕನವರ ವಚನಗಳಲ್ಲಿ ಮಹಿಳಾ ಸ್ವಾತಂತ್ರ್ಯ, ಲಿಂಗಸಮಾನತೆ, ಮಹಿಳಾ ಸಾಮಾಜಿಕ ಭದ್ರತೆ, ಮಹಿಳಾ ಸ್ಥಿತಿಗತಿಗಳನ್ನು ವಿವರಿಸಿದ್ದರು ಎಂದರು.

ಕರ್ನಾಟಕ ಗ್ರಾಮೀಣ ಬ್ಯಾಂಕ್‌ನ ನಿವೃತ್ತ ಅಧಿಕಾರಿ ಶ್ರೀಮತಿ ಜಂಗಮ ಸುವರ್ಣ, ಹಿರಿಯ ವಕೀಲರಾದ ಅಯ್ಯಪ್ಪ, ದಾನಿಗಳಾದ ಸಂಗನಕಲ್ಲು ಚನ್ನನಗೌಡ ದಂಪತಿಗಳು, ಶ್ರೀಧರಗಡ್ಡೆ ಮತ್ತು ಸೋಮಸಮುದ್ರ ಅಕ್ಕನ ಬಳಗದ ಮುಖಂಡರು ವೇದಿಕೆಯಲ್ಲಿ ಉಪಸ್ಥಿತರಿದ್ದರು.

ಶ್ರೀಗುರು ಪುಟ್ಟರಾಜ ಗವಾಯಿಗಳ ಸಂಗೀತ ಪಾಠ ಶಾಲೆಯ ವಿದ್ಯಾರ್ಥಿಗಳು ಪ್ರಾರ್ಥನೆ ಸಲ್ಲಿಸಿದರು. ಬಳ್ಳಾರಿಯ ಅಕ್ಕನ ಬಳಗದ ಶ್ರೀಮತಿ ಸುಶೀಲ ಶಿರೂರ ಅವರು ಸ್ವಾಗತಿಸಿ, ಕಾರ್ಯಕ್ರಮ ನಿರೂಪಿಸಿದರು. ವನಜಾಕ್ಷಿ ಅವರು ವಂದನಾರ್ಪಣೆ ಸಲ್ಲಿಸಿದರು. ಗದಗ ಜಿಲ್ಲೆಯ ನರೆಗಲ್ಲುನ ಎಸ್ಎವಿವಿಪಿ ಕಿವುಡ ಮಕ್ಕಳ ಶಾಲೆಯ ವಿದ್ಯಾರ್ಥಿಗಳು ಪ್ರದರ್ಶನ ಮಾಡಿದ 'ಕಡ್ಲಿಮಟ್ಟಿ ಕಾಶೀಬಾಯಿ' ಜನಪದ ನಾಟಕವು ಪ್ರೇಕ್ಷಕರ ಮನಸೂರೆಗೊಂಡಿತು.

# ಅನುಭವದ ಕಾವ್ಯ ಕಟ್ಟುತ್ತದೆ ಸಮಾಜ:ಶೇರಿ

ವಾಡಿ:ನ.18:ಕವಿಯ ನಡೆ ನುಡಿ ಒಂದಿಲ್ಲದ ಕವಿತೆ ಜನಮನ ತಟ್ಟುವ ಮೊದಲೇ ಕಾಣೆಯಾಗುತ್ತದೆ. ಕವಿಯ ಅನುಭವದಿಂದ ಹುಟ್ಟಿದ ಕಾವ್ಯ ಸಮಾಜ ಕಟ್ಟುತ್ತದೆ ಎಂದು ಹಿರಿಯ ಸಾಹಿತಿ ಲಿಂಗಾರೆಡ್ಡಿ ಶೇರಿ ಹೇಳಿದರು.

ಕನ್ನಡ ರಾಜ್ಯೋತ್ಸವ ನಿಮಿತ್ಯ ಶನಿವಾರ ಪಟ್ಟಣದ ಎನ್ ಆರ್ ಎಂ ಯು ಸಭಾಂಗಣದಲ್ಲಿ ಕಸಾಪ ವಾಡಿ ವಲಯ ಘಟಕದ ವತಿಯಿಂದ ಏರ್ಪಡಿಸಲಾಗಿದ್ದ ಚಿತ್ತಾಪುರ ತಾಲೂಕು ಮಟ್ಟದ ಶಿಕ್ಷಕರ ಕವಿಗೋಷ್ಠಿ ಕಾರ್ಯಕ್ರಮ ಉದ್ದೇಶಿಸಿ ಅವರು ಮಾತನಾಡಿದರು. ಪತ್ಯದ ನಂಟಿರುವ ಶಿಕ್ಷಕರಿಗೆ ಸಾಹಿತ್ಯದ ಗಂಟು ಕಗ್ಗಂಟಾಗದು. ಭಾವನಾ ಜೀವಿ ಕವಿಗಳು ಕಲ್ಪನಾ ಲೋಕದ ಒಡೆಯರಾಗಿರುತ್ತಾರೆ. ಕವಿಯ ಕಲ್ಪನೆಯೇ ಕಾವ್ಯವಾಗುತ್ತದೆ. ಯುವ ಕವಿಗಳು ಕವಿತೆ ಬರೆಯುವ ಮುನ್ನ ಕುವೆಂಪು, ಬೇಂದ್ರೆ, ಕಾರಂತ, ಶಿವರುದ್ರಪ್ಪ, ರನ್ನ, ಪೊನ್ನ, ಬಸವಣ್ಣನವರ ಸಾಹಿತ್ಯವನ್ನು ಓದಿಕೊಳ್ಳಬೇಕು ಎಂದರು.

ಭಾವನೆಗಳು ಬೆಸೆದು ಅಕ್ಷರ ರೂಪದಲ್ಲಿ ಅರಳುವ ಪದ್ಯ, ಗದ್ಯ, ಕಾವ್ಯಗಳು, ಕಷ್ಟವನ್ನೇ ಹೊದ್ದು ಬದುಕುವವರ ಧ್ವನಿಯಾಗಿ ನಿಲ್ಲಬೇಕು. ಕಲಬುರ್ಗಿ ನೆಲದ ಬಂಡಾಯ ಕವಿ ದಿ.ಚನ್ನಣ್ಣ ವಾಲೀಕಾರ ಅವರು "ಯಾವ ಅಕ್ಷರದಿಂದ ಬರೆದು ತೋರಿಸಲಣ್ಣ ನನ್ನ ಜನಗಳಿಗಾದ ಎದೆಯ ಬ್ಯಾನಿ" ಕವಿತೆ ಹೋರಾಟದ ಹಾಡಾಗಿ ದುಡಿಯುವ ಶೋಷಿತ ಜನರ ರಟ್ಟೆಯ ಶಕ್ತಿಯಾಗಿ ಸಿಡಿಯಿತು. ಇಂಥಹ ಕವಿತೆಗಳು ಮತ್ತೆ ಮತ್ತೆ ಹುಟ್ಟಬೇಕಿದೆ. ಈ ದಿಶೆಯಲ್ಲಿ ಕವಿಗಳು ಸಾಹಿತ್ಯ ಕೃಷಿ ಕೈಗೊಂಡರೆ ಈ ವ್ಯವಸ್ಥೆಯಲ್ಲಿ ತುಸು ಬದಲಾವಣೆ ತರಬಹುದಾಗಿದೆ ಎಂದು ವಿವರಿಸಿದರು.

ಸಾವಿತ್ರಿಬಾಯಿ ಫುಲೆ ಶಿಕ್ಷಕಿಯರ ಸಂಘದ ತಾಲೂಕು ಅಧ್ಯಕ್ಷೆ ನಾಗುಬಾಯಿ ಮಲಘಾಣ ಅವರು ಸಸಿಗೆ ನೀರುಣಿಸಿ ಕಾರ್ಯಕ್ರಮ ಉದ್ಘಾಟಿಸಿದರು. ಎನ್ ಆರ್ ಎಂ ಯು ಸೊಲ್ಲಾಪುರ ವಿಭಾಗದ ಮಾಜಿ ಕಾರ್ಯದರ್ಶಿ ಪಿ.ಉಮಾಪತಿ, ಕಸಾಪ ಗೌರವ ಸಲಹೆಗಾರ ಮಡಿವಾಳಪ್ಪ ಹೇರೂರ ಮಾತನಾಡಿದರು. ಕಸಾಪ ಅಧ್ಯಕ್ಷ ಸಿದ್ದಯ್ಯಶಾಸ್ತ್ರಿ ನಂದೂರುಮಠ ಅಧ್ಯಕ್ಷತೆ ವಹಿಸಿದ್ದರು.

ಕಸಾಪ ತಾಲೂಕು ಅಧ್ಯಕ್ಷ ವೀರಭದ್ರಪ್ಪ ಗುರುಮಠಕಲ್ ಸೇರಿದಂತೆ ವಿವಿಧ ಶಾಲೆಗಳ ಶಿಕ್ಷಕರಾದ ಇರ್ಫಾನಾಬೇಗಂ, ಶಿವಲೀಲಾ ತುನ್ನೂರ, ಶಂಕ್ರೆಪ್ಪ ಜುಮಲಾಪುರ, ಶರಣು ದೋಶೆಟ್ಟಿ, ಹುಸೇನ್ ಪಾಶಾ ಇನಾಮ್ದಾರ, ಲೋಕೇಶ ಡಿಎವಿ, ಭೀಮರೆಡ್ಡಿ, ಮಂಜುನಾಥ ನಾಯ್ಕಲ್, ರಾಜೇಂದ್ರ ಕೊಲ್ಲೂರು, ಸುರೇಶ ಕುಲಕರ್ಣಿ, ರಮಾ ದೊಡ್ಡಮನಿ, ಸಾಗರ ಡಿ.ವಾಘ್ಮೋರೆ, ರವೀಂದ್ರ ಬೆಳಮಗಿ, ಗುಂಡಪ್ಪ ಭಂಕೂರ, ಅರುಣ ಸುಣಗಾರ ಅವರು ಕನ್ನಡ ನುಡಿ ಜಲ ಸಂಸ್ಕೃತಿ ಕುರಿತು ಸ್ವರಚಿತ ಕವನ ವಾಚಿಸಿದರು. ಕಸಾಪದ ದೇವಿಂದ್ರ ಕರದಳ್ಳಿ, ದಯಾನಂದ ಖಜೂರಿ, ವೀರಣ್ಣ ಯಾರಿ, ಖೇಮಲಿಂಗ ಬೆಳಮಗಿ, ಸಂತೋಷ ಕೋಮಟೆ, ಆನಂದ ಆರ್.ಎನ್ ಪಾಲ್ಗೊಂಡಿದ್ದರು. ಬಸವರಾಜ ಕೇಶ್ವಾರ ಸ್ವಾಗತಿಸಿದರು. ರವಿ ಕೋಳಕೂರ ನಿರೂಪಿಸಿದರು. ಚಂದ್ರಕಾಂತ ಣಿಕ ವಂದಿಸಿದರು. ಈರಣ್ಣ ಯಲಗಟ್ಟಿ ಅವರಿಂದ ಕನ್ನಡ ಗೀತಗಾಯನ ನಡೆಯಿತು.





# ಅಂಗವಿಕಲರ ಪೆನ್ಷನ್ ಹೆಚ್ಚಳಕ್ಕೆ ಸರ್ಕಾರ ನಿರ್ಲಕ್ಷ್ಯ ಪ್ರತಿಭಟನೆಗೆ ಅಂಗವಿಕಲರ ಪಾಲಕರ ಒಕ್ಕೂಟ ನಿರ್ಧಾರ




ಬಳ್ಳಾರಿ:ನ.18:ರಾಜ್ಯದ ಅಂಗವಿಕಲರು ಗಡಿಪಾರು ಸಂಕಷ್ಟದಲ್ಲಿ ಜೀವನ ಸಾಗಿಸುತ್ತಿದ್ದು, ಪೆನ್ಷನ್ ಹೆಚ್ಚಳದ ಬೇಡಿಕೆಗೆ ಸರ್ಕಾರ ಸ್ಪಂದಿಸದೆ ಇರುವುದನ್ನು ಖಂಡಿಸಿ ರಾಜ್ಯದಂತ ಬೃಹತ್ ಪ್ರತಿಭಟನೆಗೆ ಅಂಗವಿಕಲರು ಹಾಗೂ ಪಾಲಕರ ಒಕ್ಕೂಟ ತೀರ್ಮಾನಿಸಿದೆ ಎಂದು ಒಕ್ಕೂಟದ ರಾಜ್ಯ ಪ್ರಧಾನ ಕಾರ್ಯದರ್ಶಿ ರಂಗಪ್ಪ ದಾಸರ್ ತಿಳಿಸಿದ್ದಾರೆ.

ನಗರದ ಪತ್ರಿಕಾ ಭವನದಲ್ಲಿ ಇಂದು ಸುದ್ದಿಗೋಷ್ಠಿ ನಡೆಸಿದ ಅವರು, ಕಳೆದ ಹಲವಾರು ವರ್ಷಗಳಿಂದ ಅಂಗವಿಕಲರ ಪೆನ್ಷನ್ ಹೆಚ್ಚಳ ಹಾಗೂ ಹಕ್ಕುಗಳ ರಕ್ಷಣೆಗಾಗಿ ನಿರಂತರ ಹೋರಾಟ ನಡೆಯುತ್ತಿದ್ದರೂ ಸರ್ಕಾರ ಯಾವುದೇ ಸ್ಪಂದನೆ ನೀಡದಿರುವುದು ಖೇದಕರ ಎಂದರು.

“ಗತ ಬಾರಿ ಬೆಂಗಳೂರಿನ ಫ್ರೀಡಂ ಪಾರ್ಕ್‌ನಲ್ಲಿ ನಡೆದ ರಾಜ್ಯಮಟ್ಟದ ಮಹಾ ಪ್ರತಿಭಟನೆಯಲ್ಲಿ ಸರ್ಕಾರ ಮಧ್ಯಸ್ಥಿಕೆ ವಹಿಸಿ ‘ನಿಮ್ಮ ಬೇಡಿಕೆ ಪರಿಹರಿಸಲಾಗುತ್ತದೆ’ ಎಂದು ಭರವಸೆ ನೀಡಿತ್ತು. ಆದರೆ ಇಂದಿನವರೆಗೂ ಮಾತುಕತೆಗೆ ಕರೆಯದಿರುವುದು ಸರ್ಕಾರದ ವಾಗ್ದಾನ ಭಂಗ” ಎಂದು ದಾಸರ್ ಆರೋಪಿಸಿದರು.

2016ರ ಅಂಗವಿಕಲರ ಹಕ್ಕುಗಳ ಕಾಯ್ದೆಯ ಪ್ರಕಾರ ಘನತೆಪೂರ್ಣ ಜೀವನ ನಡೆಸಲು ಪೆನ್ಷನ್ ಮುಖ್ಯ ಆಧಾರವಾಗಿದ್ದರೂ, ಸರ್ಕಾರ ಇದನ್ನು ಗಂಭೀರವಾಗಿ ಪರಿಗಣಿಸದೆ ಇರುವುದನ್ನು ಅವರು ತೀವ್ರವಾಗಿ ಎತ್ತಿಹಿಡಿದರು.

“ಶಿಕ್ಷಣ□ಉದ್ಯೋಗ ಅವಕಾಶಗಳಿಂದ ವಂಚಿತರಾಗಿರುವ ಸಾವಿರಾರು ಅಂಗವಿಕಲರು ಸರ್ಕಾರ ನೀಡುತ್ತಿರುವ 800 ರಿಂದ 1,400 ರೂ. ಪೆನ್ಷನ್‌ನಲ್ಲಿ ಬದುಕುವುದು ಹೇಗೆ ಸಾಧ್ಯ?” ಎಂದು ಪ್ರಶ್ನಿಸಿ,

“ರಾಜ್ಯ ಸರ್ಕಾರ ಗ್ಯಾರಂಟಿ ಕಾರ್ಯಕ್ರಮಗಳನ್ನು ಜಾರಿಗೊಳಿಸಿದರೂ ಅಂಗವಿಕಲರ ಗ್ಯಾರಂಟಿಯನ್ನು ಮರೆತಿದೆ” ಎಂದರು.

ಅಂಗವಿಕಲರಿಗೆ ಕನಿಷ್ಠ 10,000 ಪೆನ್ಷನ್ ನಿಗದಿಪಡಿಸುವಂತೆ ಅವರು ಸರ್ಕಾರವನ್ನು ಒತ್ತಾಯಿಸಿದರು.

ಅಂಗವಿಕಲರ ದಿನಾಚರಣೆಯ ಅಂಗವಾಗಿ ರಾಜ್ಯದಂತ ಭವ್ಯ ಪ್ರತಿಭಟನೆ ಕೈಗೊಳ್ಳಲಾಗುವುದಾಗಿ ಘೋಷಿಸಿ, ಬೇಡಿಕೆ ಈಡೇರಿಸುವವರೆಗೆ ಹೋರಾಟ ಮುಂದುವರೆಯಲಿದೆ ಎಂದು ಒಕ್ಕೂಟ ಸ್ಪಷ್ಟಪಡಿಸಿದೆ

ಈ ವೇಲೆ ಜಿಲ್ಲಾಧ್ಯಕ್ಷ ಎನ್ ಕುಮಾರಪ್ಪ, ವರಲಕ್ಷ್ಮಿಕೆ ಇರ್ಲಿಸ್ವಾಮಿ, ಪಾರ್ವತಿ ಬಾಯಿ, ನಾಗು ನಾಯಕ್, ರಾಜ ನಾಯಕ್, ಬಂಗಾರಪ್ಪ ಮೊದಲಾದವರು ಇದ್ದರು.

# ಪ್ರತಿ ಟನ್ ಕಬ್ಬಿಗೆ ನಿಗದಿಪಡಿಸಿದ ದರದಂತೆ ಹಣ ನೀಡಲು ಸಕ್ಕರೆ ಕಾರ್ಖಾನೆಗಳು ಒಪ್ಪಿಗೆ ನೀಡಿವೆ:ಸಚಿವ ಪ್ರಿಯಾಂಕ್ ಖರ್ಗೆ

ಕಲಬುರಗಿ,ನ.18:ಜಿಲ್ಲೆಯ ಎಲ್ಲಾ ಐದು ಹಾಗೂ ಯಾದಗಿರಿ ಜಿಲ್ಲೆಯ ಒಂದು ಸಕ್ಕರೆ ಕಾರ್ಖಾನೆಗಳು ಟನ್ ಕಬ್ಬಿಗೆ ರೂ 2,950/– ಗಳಂತೆ ಕಬ್ಬು ಪೂರೈಸಿದ 14 ದಿನಗಳೊಳಗಾಗಿ ರೂ 2950/– ಗಳನ್ನು ನೀಡಲು ಒಪ್ಪಿದ್ದಾರೆ ಎಂದು ಗ್ರಾಮೀಣಾಭಿವೃದ್ಧಿ ಹಾಗೂ ಪಂಚಾಯತ್ ರಾಜ್ ಮತ್ತು ಕಲಬುರಗಿ ಜಿಲ್ಲಾ ಉಸ್ತುವಾರಿ ಸಚಿವ ಪ್ರಿಯಾಂಕ್ ಖರ್ಗೆ ಹೇಳಿದರು. ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ನಡೆದ ಪತ್ರಿಕಾಗೋಷ್ಠಿಯಲ್ಲಿ ಮಾತನಾಡುತ್ತಿದ್ದ ಅವರು, ಮುಖ್ಯಮಂತ್ರಿಗಳು ನಿರಂತರವಾಗಿ ಸಕ್ಕರೆ ಕಾರ್ಖಾನೆ ಮಾಲೀಕರು ಹಾಗೂ ಪ್ರತಿನಿಧಿಗಳೊಂದಿಗೆ ಚರ್ಚೆ ನಡೆಸಿದ ನಂತರ ರೈತರ ಹಿತಾಸಕ್ತಿಯನ್ನು ಗಮನದಲ್ಲಿಟ್ಟುಕೊಂಡು ಕಬ್ಬಿನ ದರ ನಿಗದಿಪಡಿಸಲಾಗಿದೆ.

ಜಿಲ್ಲೆಯ ಸಕ್ಕರೆ ಕಾರ್ಖಾನೆಯವರೊಂದಿಗೆ ಕೂಡಾ ಈ ವಿಚಾರದಲ್ಲಿ ಚರ್ಚೆ ನಡೆಸಲಾಗಿದೆ.ದರ ನಿಗದಿಪಡಿಸಿದಂತೆ ಕೊಡಲು ಅವರು ಒಪ್ಪಿಗೆ ನೀಡಿದ್ದಾರೆ ಎಂದರು. ಬೆಳೆ ಹಾನಿ ಆಗಸ್ಟ ತಿಂಗಳಿನಲ್ಲಿ ಶೇ.69 ಹೆಚ್ಚುವರಿ ಹಾಗೂ ಸೆಪ್ಟೆಂಬರ್ ಶೇ 63 ಹೆಚ್ಚುವರಿಯಾಗಿ ಸತತ ಸುರಿದ ಮಳೆಯಿಂದಾಗಿ (ಅತಿವೃಷ್ಠಿಯಿಂದಾಗಿ) ಎನ್‌ಡಿಆರ್‌ಎಫ್ ಮಾರ್ಗಸೂಚಿಯನ್ವಯ ಕೃಷಿ, ತೋಟಗಾರಿಕೆ ಮತ್ತು ಕಂದಾಯ ಇಲಾಖೆಯ ಜಂಟಿ ಸಮೀಕ್ಷೆಯ ವರದಿಯ ಅನುಸಾರ 3,24, 205 ಹೇ ಪ್ರದೇಶದಲ್ಲಿ ಬೆಳೆ ಹಾನಿ ವರದಿಯಾಗಿರುತ್ತದೆ ಎಂದು ಸರ್ಕಾರಕ್ಕೆ ವರದಿ ಸಲ್ಲಿಸಲಾಗಿರುತ್ತದೆ.

ಬೆಳೆ ಹಾನಿಯಾದ ರೈತರ ವಿವರವನ್ನು ಈಗಾಗಲೇ (ಪರಿಹಾರ) ತಂತ್ರಾಂಶದಲ್ಲಿ ದಾಖಲಿಸಿದ್ದು, ಒಟ್ಟು 3,26,183 ರೈತರಿಗೆ ರೂ. 250.97 ಕೋಟಿ ಬೆಳೆ ಹಾನಿ ಪರಿಹಾರ ಮುಂದಿನ 3–4 ದಿನಗಳಲ್ಲಿ ರೈತರ ಬ್ಯಾಂಕ್ ಖಾತೆಗೆ ಜಮೆಯಾಗಲಿದೆ ಎಂದು ಸಚಿವರು ಹೇಳಿದರು.

ಬೆಳೆ ವಿಮೆ ಯೋಜನೆಯಡಿಯಲ್ಲಿ ಮಧ್ಯಂತರ ಪರಿಹಾರ ರೂ 243.41 ಕೋಟಿ ಬಿಡುಗಡೆ. 2025–26 ನೇ ಸಾಲಿನಲ್ಲಿ ಆಗಸ್ಟೆ (ಶೇ 69 ಹೆಚ್ಚುವರಿ) ಹಾಗೂ ಸೆಪ್ಟೆಂಬರ್ (ಶೇ. 63 ಹೆಚ್ಚುವರಿ) ತಿಂಗಳಲ್ಲಿ ಸತತವಾಗಿ ಸುರಿದ ಮಳೆಯಿಂದಾಗಿ (ಅತಿವೃಷ್ಟಿಯಿಂದಾಗಿ) ಅತಿ ಹೆಚ್ಚಿನ ಪ್ರದೇಶದಲ್ಲಿ ಬೆಳೆ ಹಾನಿಯಾಗಿದೆ.

ಬೆಳೆ ಹಾನಿಯಾದ ಹತ್ತಿ, ತೊಗರಿ, ಸೂರ್ಯಕಾಂತಿ ಹಾಗೂ ಅರಿಶಿಣ ಬೆಳೆಗಳಿಗೆ ಬೆಳೆ ವಿಮೆ ಮಾಡಿಸಿದ ಒಟ್ಟು 2,67,560 ರೈತರ 3,35,046.2 ಹೇ ಪ್ರದೇಶಕ್ಕೆ ಬೆಳೆ ವಿಮೆ ಮಧ್ಯಂತರ ಪರಿಹಾರ ನೀಡಲು ಸರ್ಕಾರ ಆದೇಶಿಸಿದೆ. ಬೆಳೆವಿಮೆ ಪರಿಹಾರ ಕೆಲವೇ ದಿನಗಳಲ್ಲಿ ರೈತರ ಬ್ಯಾಂಕ್ ಖಾತೆಗೆ ಜಮೆಯಾಗಲಿದೆ.ಹತ್ತಿ : ಬೆಳೆ ವಿಮೆ ನೋಂದಣಿ ಮಾಡಿಸಿದ ರೈತರ–ಸಂಖ್ಯೆ10,025. ಪ್ರದೇಶ–11,727.5 ಹೆಕ್ಟೇರ್. ಅಂದಾಜು ಬೆಳೆ ವಿಮೆ ಮಧ್ಯಂತರ ಪರಿಹಾರ– ರೂ 9.95 ಕೋಟಿ.ತೊಗರಿ: ಬೆಳೆ ವಿಮೆ ನೋಂದಣಿ ಮಾಡಿಸಿದ ರೈತರ– ಸಂಖ್ಯೆ 2,56,845. ಪ್ರದೇಶ– 3,22,734 ಹೆಕ್ಟೇರ್. ಅಂದಾಜು ಬೆಳೆ ವಿಮೆ ಮಧ್ಯಂತರ ಪರಿಹಾರ– ರೂ 232.81ಕೋಟಿ



# ಪಾಲಿಕೆಯ ನಿರ್ಲಕ್ಷ್ಯಕ್ಕೆ ಪರರ ಪಾಲಾಗಲಿದೆವೀರನಗೌಡ ಕಾಲೋನಿಯ ನಂದನ ವನ ಪಾರ್ಕ್



ಬಳ್ಳಾರಿ,ನ.18:ನಗರದ ವೀರನಗೌಡ ಕಾಲೋನಿಯಲ್ಲಿನ ಟಿ.ಎಸ್.ನಂ 350/133 ಪ್ರದೇಶದ ಅಂದಾಜು 80 ಸೇಂಟ್ಸ್ ನ ಸಾರ್ವಜನಿಕರ “ನಂದನ ವನ ಪಾರ್ಕ್” ಇದೀಗ ಪಾಲಿಕೆಯ ಅಧಿಕಾರಿಗಳ ನಿರ್ಲಕ್ಷದಿಂದ ಪರರ ಪಾಲಾಗುವ ಪರಿಸ್ಥಿತಿ ಬಂದಿದೆ.

ಬಳ್ಳಾರಿ ಕ್ಲಬ್ ಸೇರಿದಂತೆ 18 ಎಕರೆ ಪ್ರದೇಶದಲ್ಲಿನ ಜಮೀನಿನಲ್ಲಿ 1972 ರಲ್ಲಿ ಟೌನ್ ಪ್ಲಾನಿಂಗ್ ನಿಂದ ಈ ಕಾಲೋನಿ ನಿರ್ಮಾಣಕ್ಕೆ ಸಂಗನಕಲ್ಲಿನ ಸಣ್ಣ ಶರಣಪ್ಪ, ದೊಡ್ಡ ಶರಣಪ್ಪ ಅವರು ಅನುಮತಿ ಪಡೆದಿದ್ದಾರೆ.

ಟೌನ್ ಪ್ಲಾನಿಂಗ್ ಗೆ ನೀಡಿದ ನಕ್ಷೆ(ಸ್ಕೆಚ್)ನಲ್ಲಿ ಇದನ್ನು ಪಾರ್ಕ್ ಎಂದು ತೋರಿಸಲಾಗಿದೆ. ಕಾಲೋನಿ ನಿವಾಸಿಗಳ ಮನವಿಯ ಮೇರೆಗೆ ಆಗ ಸಚಿವರಾಗಿದ್ದ ಜನಾರ್ಧನರೆಡ್ಡಿ ಅವರು 2010 ರಲ್ಲಿ ಜಿಂದಾಲ್ ನಿಂದ ಸಿಎಸ್ ಆರ್ ಫಂಡ್ ನಲ್ಲಿ ಅಭಿವೃದ್ಧಿ ಪಡಿಸಿ, ಪರಗೋಲ ನಿರ್ಮಿಸಿ,ಪೌಂಟೇನ್ ಅಳವಡಿಸಿ ಕಾಂಪೌಂಡ ಸಹ ನಿರ್ಮಿಸಲಾಗಿತ್ತು.

ನಂತರ ಬುಡಾದಿಂದ ಓಪನ್ ಜಿಮ್ ಸಹ ನಿರ್ಮಿಸಿದೆ.ಪಾಲಿಕೆಯಿಂದ ಹೌಮಾಸ್ಡ್ ಲೈಟ್ ಅಳವಡಿಸಿದೆ.ಅಲ್ಲದೆ ಪಾರ್ಕ್ ನಿರ್ವಹಣೆಗೆಂದು ಪಾಲಿಕೆ ಮಾಸಿಕ ಹತ್ತು ಸಾವಿರದಂತೆ ಹಣವನ್ನೂ ಸಹ ನೀಡಿತ್ತು.

ಗಿಡ ಮರಗಳಿಂದ. ಹಚ್ಚಹಸಿರಿನಿಂದ ಕಂಗೊಳಿಸುವ ಈ ನಂದನ ವನ ಪಾರ್ಕ್ ನಿವೃತ್ತರಿಗೆ ನೆಮ್ಮದಿಯ, ಮಕ್ಕಳ ಕ್ರೀಡೆಗಳಿಗೆ ಮನರಂಜನೆಯ ತಾಣವೂ ಆಗಿದೆ. ಆದರೆ ಈಗ ಈ ಪಾರ್ಕ್ ಪರರ ಪಾಲಾಗುವ ಪರಿಸ್ಥಿತಿಗೆ ಬಂದಿದೆ ಕಾರಣ ಪಾಲಿಕೆಯ ಅಧಿಕಾರಿಗಳ ನಿರ್ಲಕ್ಷದಿಂದಾಗಿ.

ವಿವಾದ ಏನು: ಪಾರ್ಕ್ ಅಭಿವೃದ್ಧಿ ಪಡಿಸುವಾಗ ಕಾಲೋನಿಯ ಮೂಲ ಮಾಲೀಕರ ಸಂಬಂಧಿ, ವಕೀಲರಾದ ಸಂಗನಕಲ್ಲು ಇಂದು ಶೇಖರ್ ಅವರು ಈ ನಿವೇಶನ ನಮಗೆ ಸಂಧಿಸಿದ್ದೆಂದು. ನಕಲಿ ದಾಖಲೆಗಳನ್ನು ನ್ಯಾಯಾಲಯದಲ್ಲಿ ನೀಡಿ ಸ್ಟೇ ತಂದಿದ್ದರು. ಈ ವೇಳೆ ಅವರ ಪತ್ನಿ ಪಾರ್ವತಿ ಇಂದು ಶೇಖರ್ ಮೇಯರ್ ಆಗಿದ್ದರು. ಇದಕ್ಕೆ ಸಂಬಂಧಿಸಿದ ಮೂಲದಾಖಲೆಗಳು ಪಾಲಿಕೆಯಲ್ಲಿ ನಾಪತ್ತೆಯಾಗಿವೆ ಎಂದು ಇಂದು ಶೇಖರ್ ಅವರ ಪ್ರಕರಣವನ್ನು ನ್ಯಾಯಾಲಯದಲ್ಲಿ ಪಾಲಿಕೆ ಅಧಿಕಾರಿಗಳು ಸ್ಪಂದಿಸದ ಕಾರಣ 2013 ರಲ್ಲಿ ಅವರಂತೆ ಡಿಕ್ರಿ ಆಗಿದೆ. ಈ ಮಧ್ಯೆ ನಾವು ಡಿಕ್ರಿಗೆ ಹೈ ಕೋರ್ಟಿನಲ್ಲಿ ಸ್ಟೇ ತಂದಿದೆ.

ಆದರೆ ಇಂದು ಶೇಖರ್ ಅವರು ಡಿಕ್ರಿ ಆಗಿದ್ದರೂ ,2023 ರ ವರೆಗೆ ಸುಮ್ಮನಿದ್ದ ಅವರು ಈಗ ನಾಯಾಲಯದಲ್ಲಿ 2023 ರ ಡಿಕ್ರಿಗೆ ಎಕ್ಸಿಕ್ಯೂಟಿವ್ ಪಿಟಿಷನ್ ಹಾಕಿದ್ದಾರೆ. ಈ ಪ್ರಕರಣದಲ್ಲಿ ನಮ್ಮನ್ನು ನ್ಯಾಯಾಲಯ ಪ್ರತಿವಾದಿಗಳನ್ನಾಗಿ ಪರಿಗಣಿಸಿಲ್ಲ. ಪಾಲಿಕೆಯವರನ್ನು ಈ ಬಗ್ಗೆ ದಾಖಲೆ ನೀಡಿ ಎಂದು ಕೇಳಿದ್ದರೂ ಪಾಲಿಕೆಯ ವಕೀಲರು ನೀಡದೆ ಪಾರ್ಕ್ ಇಗ ಪರರ ಪಾಲಾಗುವ ಹಂತಕ್ಕೆ ಬಂದುನಿಂತಿದೆ.

ಇಂದು ವೀರನಗೌಡ ಮತ್ತು ಗಣೇಶನಗರ ನಿವಾಸಿಗಳ ಸಂಘದ. ಅಧ್ಯಕ್ಷ, ಕೆ. ಬಸನಗೌಡ, ಪ್ರಧಾನ ಕಾರ್ಯದರ್ಶಿ ಪಿ.ಬಸನಗೌಡ, ಖಜಾಂಚಿ ಶರಣಗೌಡ, ಕಾರ್ಯಕಾರಿ ಸಮಿತಿ ಸದಸ್ಯರು ಸುದ್ದಿಗೋಷ್ಟಿ ನಡೆಸಿ.ಈ ಸಮಸ್ಯೆ ಬಗ್ಗೆ ಈ ಹಿಂದಿನ ಪಾಲಿಕೆ ಆಯುಕ್ತ ಕಲೀಲ್ ಅವರನ್ನು ಭೇಟಿ ಮಾಡಿ ಹೇಳಿದ್ದರೂ ಕಿವಿಯಲ್ಲಿ ಹಾಕಿಕೊಳ್ಳಲಿಲ್ಲ.ಪಾಲಿಕೆಯಲ್ಲಿ ಈ ಬಗ್ಗೆ ದಾಖಲೆಗಳಿಲ್ಲ. ನಾವು ಕೊಟ್ಟರೂ ಮಾಯ ಆಗುತ್ತವೆ.

# ಜನಪದ ಸಾಹಿತ್ಯ ನಮ್ಮೆಲ್ಲರ ಬದುಕಿನ ಜೀವನಾಡಿ : ಜ್ಯೋತಿರ್ಲಿಂಗ ಹೊನಕಟ್ಟಿ

ವಿಜಯಪುರ,ನ.18: ಭಾರತೀಯ ಸನಾತನ ಸಂಸ್ಕೃತಿ, ಸಂಪ್ರದಾಯದಲ್ಲಿ ಅನೇಕ ಆಚಾರ, ವಿಚಾರಗಳಿದ್ದು, ಅವುಗಳೆಲ್ಲ ನಮ್ಮ ಜನಪದ ಸಂಸ್ಕೃತಿಯ ಮೂಲ ಬೇರುಗಳು. ವಿಜಯಪುರದ ಹಲಸಂಗಿ ಗೆಳೆಯರ ಬಳಗದ ಶ್ರೇಷ್ಠ ಸಾಹಿತಿಗಳಾದ ಮಧುರಚೆನ್ನರು, ಪಿ.ಧೂಲಾಸಾಹೇಬ, ಸಿಂಪಿ ಲಿಂಗಣ್ಣ, ಕಾಪಸೆ ರೇವಪ್ಪ ಮುಂತಾದವರು ಗರತಿಯ ಹಾಡು, ಮಲ್ಲಿಗೆ ದಂಡೆ, ಜೀವನ ಸಂಗೀತದಂತಹ ಹಲವಾರು ಜನಪದ ಸಾಹಿತ್ಯ ಸಂಕಲನಗಳನ್ನು ಪ್ರಕಟಿಸಿ ಜನಪದ ಸಾಹಿತ್ಯವನ್ನು ಶ್ರೀಮಂತಗೊಳಿಸಿದ್ದಾರೆ. ಜನಪದ ಸಾಹಿತ್ಯ ಇಂದು ನಮ್ಮೆಲ್ಲರ ಬದುಕಿನ ಜೀವನಾಡಿಯಾಗಿ ಹೊರಹೊಮ್ಮಿದೆ ಎಂದು ಹುಬ್ಬಳ್ಳಿ ವೃತ್ತ ನಿರೀಕ್ಷಕ, ಜನಪದ ವಿದ್ವಾಂಸ ಜ್ಯೋತಿರ್ಲಿಂಗ ಹೊನಕಟ್ಟಿ ಅಭಿಪ್ರಾಯಪಟ್ಟರು.

ರವಿವಾರ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಸಭಾಂಗಣದಲ್ಲಿ ಜರುಗಿದ ಲಿಂ. ಮಾತೋಶ್ರೀ ಗುರವ್ವ ಶಿವಲಿಂಗಪ್ಪ ಹೊರಟ್ಟಿ ದತ್ತಿ ಹಾಗೂ ಲಿಂ.ಶಿವಪ್ಪ ಮಲ್ಲಪ್ಪ ಅವರಾಧಿ ದತ್ತಿ ಹಾಗೂ ದಿ. ಪ್ರೊ. ತಿಪ್ಪಣ್ಣ ಕರೆಪ್ಪ ಮತ್ತು ಕಲ್ಯಾಣಗೋಳ ದತ್ತಿ ಕಾರ್ಯಕ್ರಮದಲ್ಲಿ “ಜಾನಪದ ಸಾಹಿತ್ಯದ ಕೊಡುಗೆ” ಎಂಬ ದತ್ತಿಗೋಷ್ಠಿಯನ್ನು ಉದ್ಘಾಟಿಸಿ ಮಾತನಾಡಿದ ಅವರು, ಜನಪದ ಸಾಹಿತ್ಯ ನಮ್ಮೆಲ್ಲರ ತಾಯಿಬೇರು. ನಮಗೆಲ್ಲ ಅದ್ಭುತವಾದ ಜೀವನ ಕಟ್ಟಿಕೊಡುವಲ್ಲಿ ಈ ಜಾನಪದ ಸಾಹಿತ್ಯ ತನ್ನ ವಿಶಿಷ್ಟವಾದ ಛಾಪನ್ನು ಮೂಡಿಸಿದೆ ಎಂದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಚಡಚಣ ಸಂಗಮೇಶ್ವರ ಪದವಿ ಮಹಾವಿದ್ಯಾಲಯದ ಪ್ರಾಧ್ಯಾಪಕ ಡಾ. ಎಂ.ಎಸ್. ಮಾಗಣಗೇರಿ ಮಾತನಾಡಿ, ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು ದತ್ತಿ ಗೋಷ್ಠಿಗಳಿಗೆ ಜೀವ ತುಂಬುವ ಮೂಲಕ ಅನುಭವಾತ್ಮಕ ಉಪನ್ಯಾಸಗಳನ್ನು ಏರ್ಪಡಿಸಿ ಸಮಾಜಕ್ಕೆ ಉತ್ತಮ ಸಂದೇಶ ನೀಡುವ ಕಾರ್ಯ ಮಾಡುವ ಮೂಲಕ ಜಿಲ್ಲೆಯ ಗೌರವವನ್ನು ಹೆಚ್ಚಿಸಿದೆ ಎಂದರು.

ಜಾನಪದ ಸಾಹಿತ್ಯದ ಕೊಡುಗೆ” ಎಂಬ ವಿಷಯದ ಕುರಿತು ಎಕ್ಸಲೆಂಟ್ ಪ.ಪೂ ಕಾಲೇಜಿನ ಉಪನ್ಯಾಸಕ ಶರಣಗೌಡ ಪಾಟೀಲ ಮಾತನಾಡಿ, ಜನಪದ ಹಾಡುಗಳು, ಗಾದೆಗಳು ಒಗಟುಗಳು ನಮ್ಮ ಸಾಂಸ್ಕೃತಿಕ ಪರಂಪರೆಯನ್ನು ಸಂರಕ್ಷಿಸುವ ಮೂಲಕ ಇಂದಿಗೂ ಸಹ ಜಾನಪದ ಸಾಹಿತ್ಯವನ್ನು ಜೀವಂತವಾಗಿರಿಸಿವೆ ಎಂದರು.

ವೇದಿಕೆಯಲ್ಲಿ ಮುಖ್ಯ ಅತಿಥಿಗಳಾಗಿ ರಮೇಶ ಜಾಧವ, ಮಡಿವಾಳಪ್ಪ ಅವರಾದಿ, ನೀಲಕಂಠ ಕಂದಗಲ್, ಮಂಜುಳಾ ಕಾಳಗಿ, ಎಂ.ಬಿ. ಮಾಶೆಟ್ಟಿ, ವಿಜಯಾ ಬಿರಾದಾರ, ಕಿರಣ ಕಾಳೆ, ಅಮೀನಸಾಬ ಬುರಾಣಗೋಳ ಮುಂತಾದವರು ಮಾತನಾಡಿದರು.ಇದೇ ಸಂದರ್ಭದಲ್ಲಿ ಪತ್ರಿಕಾ ರಂಗದ ಸಾಧಕರಾದ ಅಶೋಕ ಯಡಹಳ್ಳಿ, ಶಶಿಕಾಂತ ಮೆಂಡೆಗಾರ. , ಕಾಶೀಮ ಪಟೇಲ ಪಾಟೀಲ, ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತರಾದ ಮಲ್ಲಿಕಾರ್ಜುನ ಪಟ್ಟಣಶೆಟ್ಟಿ, ನಿಂಗಪ್ಪ ನಾವಿ, ಅಸ್ಪಾಕ ಜಹಾಗೀರದಾರ ಹಾಗೂ ಚಿತ್ರ ವಿನ್ಯಾಸಕ ಹನೀಫ ಮುಲ್ಲಾ, ಮುರಳೀಧರ ಭಾವಿಕಟ್ಟಿ, ಶಿವಾಜಿ ಮೋರೆ ಮುಂತಾದ ಸಾಧಕರನ್ನು ಪರಿಚಯಿಸಿ ಗೌರವಿಸುವ ಮೂಲಕ ಸತ್ಕರಿಸಲಾಯಿತು.

ಗೌರವ ಕಾರ್ಯದರ್ಶಿ ಶಿಲ್ಪಾ ಭಸ್ಮೆ ಸ್ವಾಗತಿಸಿ ಗೌರವಿಸಿದರು. ಡಾ.ಆನಂದ ಕುಲಕರ್ಣಿ ಪ್ರಾಸ್ತಾವಿಕ ನುಡಿಗಳನ್ನಾಡಿದರು. ಗೌರವ ಕಾರ್ಯದರ್ಶಿ ಡಾ.ಮಾಧವ ಗುಡಿ ಸಾಧಕರನ್ನು ಪರಿಚಯಿಸಿದರು. ಶಿಕ್ಷಕ ಯಮನಪ್ಪ ಪವಾರ ನಿರೂಪಿಸಿದರು. ಪರವೀನ ಶೇಖ ವಂದಿಸಿದರು.



D.Amosh.R
Cell: 9663949603
ಆರ್.ಪಿ. ಪ್ರಿಂಟಿಂಗ್ ಪ್ರೆಸ್
RP Printing Press
MULTI COLOUR | OFFSET | SCREEN & ALL TYPES OF PRINTING
Kamshetty Complex, Udgir Road, Bidar

Cell: 9886970762
8867199064
Max Power
MOBILE CENTER
A complete Accessories Service Point
All Mobile Sales & repairing
Kamshetty Complex, Opp: Gurudwara Gate, Bidar

Jai Bhavani Prasanna
Cell: 9164044426
9019122161
Srikanth A/c
Hair Saloon
With Mens Parlour
Kamshetty Complex, Opp: Gurudwara Gate, Bidar

# ವಿದ್ಯಾರ್ಥಿಗಳು ಹೆಚ್ಚು ಹೆಚ್ಚು ಪುಸ್ತಕ ಓದಬೇಕು: ಶಿವಾನಂದ ಖಜೂರಿ



ಕಲಬುರಗಿ,ನ.18: ವಿದ್ಯಾರ್ಥಿಗಳು ಪುಸ್ತಕ ಓದುವ ಹವ್ಯಾಸ ಬೆಳೆಸಿಕೊಳ್ಳಬೇಕು ಪುಸ್ತಕ ಓದುವುದರಿಂದ ಹೆಚ್ಚಿನ ಜ್ಞಾನ ಸಂಪಾದಿಸುವದು ಹಾಗೂ ಬೌದ್ಧಿಕ ಮಟ್ಟ ಹೆಚ್ಚಿಸಿಕೊಳ್ಳಬಹುದು. ಇಂದಿನ ವಿದ್ಯಾರ್ಥಿಗಳಿಗೆ ಮೌಲ್ಯಾಧಾರಿತ ಶಿಕ್ಷಣ ಅವಶ್ಯಕತೆ ಇದೆ ಎಂದು ದಿಶಾ ಪಿಯು ಕಾಲೇಜಿನ ಸಂಸ್ಥಾಪಕ ಅಧ್ಯಕ್ಷರಾದ ಶಿವಾನಂದ ಖಜೂರಿ ಹೇಳಿದರು.

ಕನ್ನಡ ಪುಸ್ತಕ ಪ್ರಾಧಿಕಾರ ಹಾಗೂ ಶ್ರೀಮತಿ ವೀರಮ್ಮ ಗಂಗಸಿರಿ ಮಹಿಳಾ ಪದವಿ ಮಹಾವಿದ್ಯಾಲಯದ ಕನ್ನಡದ ಸಂಯುಕ್ತಾಶ್ರಯದಲ್ಲಿ ಆಯೋಜಿಸಿದ್ದ ಕನ್ನಡ ರಸಪ್ರಶ್ನೆ ಕಾರ್ಯಕ್ರಮ ಹಾಗೂ ಬಹುಮಾನ ವಿತರಣಾ ಸಮಾರಂಭದಲ್ಲಿ ಅವರು ಮಾತನಾಡಿದರು.

ಕರ್ನಾಟಕ ಏಕೀಕರಣ ಹಾಗೂ ನಾಡು ನುಡಿ ಚಿಂತನೆ ಕುರಿತು ಕನ್ನಡ ಪ್ರಾಧ್ಯಾಪಕರಾದ ಡಾ.ಭಾಗ್ಯ ಜ್ಯೋತಿ ಅವರು ವಿಶೇಷ ಉಪನ್ಯಾಸ ನೀಡಿದರು.

ರಸಪ್ರಶ್ನೆಯಲ್ಲಿ ವಿಜೇತರಾದ ವಿದ್ಯಾರ್ಥಿಗಳಿಗೆ ಬಹುಮಾನ ವಿತರಣೆ ಮಾಡಿ ವಿದ್ಯಾರ್ಥಿಗಳಿಗೆ ಅನುಕೂಲವಾಗುವ ಇಂತಹ ವಿಶಿಷ್ಟ ಕಾರ್ಯಕ್ರಮಗಳು ಹೆಚ್ಚು ಹೆಚ್ಚು ನಡೆಯಬೇಕು ಎಂದು ಡಾ. ಬಸವರಾಜ ಕೊನೆಕ್ ನುಡಿದರು. ಕನ್ನಡ ಪುಸ್ತಕ ಪ್ರಾಧಿಕಾರದ ಸದಸ್ಯರಾದ ಬಿ. ಎಚ್ .ನಿರಗುಡಿಯವರು ಕನ್ನಡ ಪುಸ್ತಕ ಪ್ರಾಧಿಕಾರದ ಕೆಲವು ಕಾರ್ಯಗಳು ಹಾಗೂ ಪ್ರಾಸ್ತಾವಿಕ ಮಾತುಗಳನ್ನಾಡಿದರು.

ಕಾರ್ಯಕ್ರಮದಲ್ಲಿ ಪ್ರಾಂಶುಪಾಲರಾದ ಡಾ. ರಾಜೇಂದ್ರ ಬಿ ಕೊಂಡಾ ಅಧ್ಯಕ್ಷತೆ ವಹಿಸಿದರು. ಮೋಹನ್ ರಾಜ್ ಪತ್ತಾರ್, ಡಾ. ಮಹೇಶ್ ಗಂವ್ಹಾರ್, ಐಕೆ ಪಾಟೀಲ್ ವೇದಿಕೆ ಮೇಲೆ ಉಪಸ್ಥಿತರಿದ್ದರು.

ಕನ್ನಡ ಉಪನ್ಯಾಸಕರಾದ ಬಸಮ್ಮ ಗೊಬ್ಬೂರ್ ನಿರೂಪಣೆ ಮಾಡಿದರು. ಕವಿತಾ ಎಂ ವಂದಿಸಿದರು. ಎಚ್ ಕೆ ಇ ಮಹಿಳಾ ಪಿಯು ಕಾಲೇಜಿನ ವಿದ್ಯಾರ್ಥಿಗಳು ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ನಡೆಸಿಕೊಟ್ಟರು.

# ಅಕ್ಷರ ಜ್ಞಾನದಿಂದ ಅಜ್ಞಾನ ದೂರ: ಜಿಪಂ ಸಿಇಓ

ವಾಡಿ:ನ.18:ನಮ್ಮಲ್ಲಿರುವ ಅಂಧಕಾರ, ಮೂಢನಂಬಿಕೆ, ಅಪನಂಬಿಕೆ ಹೋಗಲಾಡಬೇಕಾದರೆ ಅಕ್ಷರ ಜ್ಞಾನ ನಮ್ಮ ಜೀವನಕ್ಕೆ ಅತ್ಯವಶ್ಯಕವಾಗಿದೆ ಎಂದು ಜಿಲ್ಲಾ ಪಂಚಾಯಿತಿ ಸಿಇಓ ಭವ್ವರಸಿಂಗ್ ಮೀನಾ ಹೇಳಿದರು.

ಸಮೀಪದ ಲಾಡ್ಲಾಪುರ ಗ್ರಾಪಂ ವ್ಯಾಪ್ತಿಯ ಡಿಗ್ಗಿ ತಾಂಡಾ ಪ್ರದೇಶದಲ್ಲಿರುವ ಏಕಲವ್ಯ ಮಾದರಿ ವಸತಿ ಶಾಲೆಯಲ್ಲಿ ನಡೆದ ಮಕ್ಕಳ ದಿನಾಚರಣೆಯ ಅಂಗವಾಗಿ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಭಾಗವಹಿಸಿ ಅವರು ಮಾತನಾಡಿದರು. ಪ್ರತಿ ಮಕ್ಕಳಿಗೆ ಮಾರ್ಗದರ್ಶನ ಅವಶ್ಯಕವಾಗಿದೆ ಬಳಿಕ ಎಲ್ಲ ಸೌಕರ್ಯಗಳನ್ನು ನೀಡುವುದು ಸಹ ಮುಖ್ಯವಾಗಿದೆ. ಗ್ರಾಮೀಣ ಭಾಗದ ಮಕ್ಕಳು ಇಂದು ಅನೇಕ ಸಾಧನೆಗಳನ್ನು ಮಾಡುತ್ತಿರುವುದು ತುಂಬಾ ಖುಷಿ ನೀಡುತ್ತಿದೆ. ಪ್ರತಿಯೊಬ್ಬರಿಗೂ ಬೆಂಬಲ ನೀಡಿದಾಗ ಇನ್ನು ಅನೇಕ ಸ್ಪರ್ಧೆಗಳಲ್ಲಿ ಗೆಲವು ಸಾಧಿಸಲು ಸಾಧ್ಯವಿದೆ. ಈ ಭಾಗದ ಸಚಿವರು ಶೈಕ್ಷಣಿಕ ಗುಣ ಮಟ್ಟಕ್ಕೆ ಉತ್ತೇಜಿಸಲು ಹೆಚ್ಚಿನ ಆದ್ಯತೆ ನೀಡುತ್ತಿದ್ದಾರೆ. ನಿಮ್ಮ ವಸತಿ ಶಾಲೆಗೆ ಸೌಕರ್ಯಗಳ ಕೊರತೆ ಇದ್ದರೆ ಮನವಿ ನೀಡಿ. ಬರಿತವಾಗಿ ಸೌಲಭ್ಯ ಕಲ್ಪಿಸಲು ಜಿಲ್ಲಾಡಳಿತ ಸನ್ನದ್ಧವಾಗಿದೆ ಎಂದು ಹೇಳಿದರು.

ಕ್ಷೇತ್ರ ಶಿಕ್ಷಣಾಧಿಕಾರಿ ಶಶಿಧರ್ ಬಿರಾದಾರ್ ಮಾತನಾಡಿ, ಚಾಚಾ ನೆಹರು ಅವರು ಮಕ್ಕಳ ಮೇಲೆ ಅಪಾರವಾದ ನಂಬಿಕೆ ಇಟ್ಟುಕೊಂಡಿದ್ದರು. ಅವರ ಹುಟ್ಟುಹಬ್ಬವನ್ನು ಮಕ್ಕಳ ದಿನಾಚರಣೆಯೆಂದೆ ಆಚರಿಸುವಂತೆ ಕರೆ ನೀಡಿದ್ದರು. ವಿದ್ಯಾರ್ಥಿಗಳು ಚಾಚಾ ನೆಹರು ಅವರ ಜೀವನ ಚರಿತ್ರೆ ತಮ್ಮ ಜೀವನದಲ್ಲಿ ಅಳವಡಿಸಿಕೊಳ್ಳಬೇಕು. ಪಾರದರ್ಶಕತೆ ಮತ್ತು ಪ್ರಾಮಾಣಿಕವಾಗಿ ಶೈಕ್ಷಣಿಕ ಗುರಿ ಇಟ್ಟುಕೊಳ್ಳಬೇಕು. ಅಂದಾಗ ಮಾತ್ರ ಜೀವನದಲ್ಲಿ ಉತ್ತಮ ಗುರಿ ಮುಟ್ಟಲು ಸಾಧ್ಯವಿದೆ ಎಂದು ವಿದ್ಯಾರ್ಥಿಗಳಿಗೆ ಸಲಹೆ ನೀಡಿದರು.

ಏಕಲವ್ಯ ಮಾದರಿ ವಸತಿ ಶಾಲೆಯ ಪ್ರಾಂಶುಪಾಲ ಸುನಿಲ್ ಕುಮಾರ್ ಬಾಲರ್ ಕಾರ್ಯಕ್ರಮ ಉದ್ದೇಶಿ ಮಾತನಾಡಿದರು. ವಿದ್ಯಾರ್ಥಿಗಳ ಜೊತೆ ಸಮಾಲೋಚನೆ ನಡೆಸಿದ ಜಿಲ್ಲಾ ಪಂಚಾಯತಿ ಸಿಇಓ ಭವ್ವರಸಿಂಗ್ ಮೀನಾ ಸೌಲಭ್ಯಗಳ ಕುರಿತು ಮಾಹಿತಿ ಪಡೆದುಕೊಂಡರು. ವಸತಿ ಶಾಲೆಯ ವಿದ್ಯಾರ್ಥಿಗಳಿಂದ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳು ಜರುಗಿದವು. ಶಿಕ್ಷಕರು ಹಾಗೂ ಮುಖಂಡರು ಭಾಗವಹಿಸಿದ್ದರು.



# ಸದೃಢ ರಾಷ್ಟ್ರ ನಿರ್ಮಾಣಕ್ಕೆ ಪತ್ರಿಕಾ ರಂಗದ ಕೊಡುಗೆ ಅಪಾರ



ಕಲಬುರಗಿ:ನ.18: ಶಾಸಕಾಂಗ, ಕಾರ್ಯಾಂಗ ಮತ್ತು ನ್ಯಾಯಾಂಗದ ಸಾಧಕ-ಬಾಧಕಗಳನ್ನು ನಾಗರಿಕರಿಗೆ ಮುಟ್ಟಿಸುವ ಕಾರ್ಯ ಮಾಡುವ ಪತ್ರಿಕಾ ರಂಗವು ನಾಲ್ಕನೇ ರಂಗವಾಗಿ ಕಾರ್ಯನಿರ್ವಹಿಸುತ್ತಿದ್ದೆ. ನ್ಯಾಯ, ಸಮಾನತೆ, ಸಂವಿಧಾನದ ಆಶಯಗಳನ್ನು ರಕ್ಷಣೆ ಮಾಡುವ ಮೂಲಕ ಸದೃಢ ರಾಷ್ಟ್ರ ನಿರ್ಮಾಣಕ್ಕೆ ಪತ್ರಿಕೆ ರಂಗದ ಕೊಡುಗೆ ಅಪಾರವಾಗಿದೆ ಎಂದು ಉಪನ್ಯಾಸಕ ಎಚ್.ಬಿ.ಪಾಟೀಲ್ ಅಭಿಮತಪಟ್ಟರು.

ನಗರದ ನ್ಯೂ ರಾಘವೇಂದ್ರ ಕಾಲನಿಯಲ್ಲಿನ 'ಮುತ್ತಾ ಟ್ಯುಟೋರಿಯಲ್ಸ್'ನಲ್ಲಿ 'ಬಸವೇಶ್ವರ ಸಮಾಜ ಸೇವಾ ಬಳಗ'ದ ವತಿಯಿಂದ ಭಾನುವಾರ ಸಂಜೆ ಏರ್ಪಡಿಲಾಗಿದ್ದ 'ರಾಷ್ಟ್ರೀಯ ಪತ್ರಿಕಾ ದಿನಾಚರಣೆ' ಕಾರ್ಯಕ್ರಮದಲ್ಲಿ ಅವರು ಮಾತನಾಡುತ್ತಿದ್ದರು.

ಪ್ರತಿಯೊಬ್ಬರಲ್ಲಿ ಪತ್ರಿಕೆ ಓದುವ ಹವ್ಯಾಸವಿರಬೇಕು. ಪತ್ರಿಕೆಗಳನ್ನು ಮೊಬೈಲ್ ಸೇರಿದಂತೆ ಮತ್ತಿತರ ಸಾಧನಗಳ ಮೂಲಕ ಓದುವುದಕ್ಕಿಂತಲೂ, ಭೌತಿಕವಾಗಿ ಪತ್ರಿಕೆಗಳನ್ನು ಓದುವುದರಿಂದ ಸಿಗುವ ತೃಪ್ತಿ ಸಿಗುವುದಿಲ್ಲ. ಪತ್ರಿಕೆಗಳು ಶಾಶ್ವತ ದಾಖಲೆಯಾಗಿವೆ. ಯಾವಾಗ ಬೇಕಾದಾಗ ನಮಗೆ ಅದರಿಂದ ಮಾಹಿತಿ ದೊರೆಯುತ್ತದೆ. ನಿಖರ ಮಾಹಿತಿ ಮತ್ತು ಶಾಶ್ವತ ದಾಖಲೆ ಒದಗಿಸುವದರಿಂದ ಎಲೆಕ್ಟ್ರಾನಿಕ್ಸ್ ಮತ್ತು ಸಾಮಾಜಿಕ ಮಾಧ್ಯಮಗಳ ಹಾವಳಿಯಲ್ಲಿಯೂ ತನ್ನ ಅಸ್ತಿತ್ವವನ್ನು ಉಳಿಸಿಕೊಂಡಿವೆ ಎಂದರು.

ಪ್ರತಿ ವರ್ಷ 'ನವೆಂಬರ್-16ನ್ನು 'ರಾಷ್ಟ್ರೀಯ ಪತ್ರಿಕಾ ದಿನಾಚರಣೆ' ಆಚರಿಸಲಾಗುತ್ತದೆ. 1966ರ ನವೆಂಬರ್ 16ರಂದು ಸ್ಥಾಪನೆಯಾದ 'ಭಾರತೀಯ ಪತ್ರಿಕಾ ಮಂಡಳಿ' ಸವಿನೆನಪಿಗಾಗಿ ಇದನ್ನು ಆಚರಣೆ ಮಾಡಲಾಗುತ್ತದೆ. ಪತ್ರಿಕಾ ರಂಗದ ಕೊಡುಗೆಯನ್ನು ಚಿಂತನ ಮಾಡುವುದು, ಪತ್ರಿಕೆಗಳ ಮಹತ್ವವವನ್ನು ವಿವರಿಸುವುದು ಸೇರಿದಂತೆ ಮತ್ತಿತರ ಚಟುವಟಿಕೆಗಳನ್ನು ಹಮ್ಮಿಕೊಳ್ಳಲಾಗುತ್ತದೆ. ಹಗಲು-ರಾತ್ರಿಯೆನ್ನದೇ ಸೇವೆ ಸಲ್ಲಿಸುವ ಪತ್ರಕರ್ತರಿಗೆ ಸಮಾಜದ ಪ್ರೋತ್ಸಾಹ, ಸಹಕಾರ ಅಗತ್ಯವಾಗಿದೆ. ವಿದ್ಯಾರ್ಥಿ ದಿಸೆಯಿಂದಲೇ ಪತ್ರಿಕೆಗಳನ್ನು ಓದುವ ಹವ್ಯಾಸ ಬೆಳೆಸಿಕೊಳ್ಳಬೇಕು. ಸರ್ವ ವಿಷಯಗಳ ಜ್ಞಾನದ ಕಣಜಗಳಾದ ಪತ್ರಿಕೆಗಳನ್ನು ಓದುವುದರಿಂದ ವ್ಯಕ್ತಿತ್ವ ವಿಕಸನ ಸಾಧ್ಯವಿದೆ ಎಂದು ನುಡಿದರು.

ಕಾರ್ಯಕ್ರಮದಲ್ಲಿ ಸಂಸ್ಥೆಯ ಅಧ್ಯಕ್ಷ ಶಿವಕುಮಾರ ಮುತ್ತಾ, ಸಮಾಜ ಸೇವಕ ಶಿವಯೋಗೆಪ್ಪಾ ಎಸ್.ಬಿರಾದಾರ, ಶಿಕ್ಷಕ ಆದರ್ಶ ಬಿರಾದಾರ ಹಾಗೂ ವಿದ್ಯಾರ್ಥಿಗಳು ಪಾಲ್ಗೊಂಡಿದ್ದರು.

# ವೃಕ್ಷಥಾನ್ ಹೆರಿಟೇಜ್ ರನ್-2025ರ ಅಂಗವಾಗಿ ಮಕ್ಕಳಿಗೆ ಸ್ಥಳದಲ್ಲಿಯೇ ಚಿತ್ರ ಬಿಡಿಸುವ ಸ್ಪರ್ಧೆ

ವಿಜಯಪುರ,ನ.18: ನಗರದಲ್ಲಿ ಡಿಸೆಂಬರ್ 7 ರಂದು ನಡೆಯಲಿರುವ ವೃಕ್ಷಥಾನ್ ಹೆರಿಟೇಜ್ ರನ್-2025ರ ಅಂಗವಾಗಿ ಮಕ್ಕಳಿಗೆ ಸ್ಥಳದಲ್ಲಿಯೇ ಚಿತ್ರ ಬಿಡಿಸುವ ಸ್ಪರ್ಧೆ ಭಾನುವಾರ ನಗರದ ಪ್ರಾಚೀನ ಸ್ಮಾರಕ ಗಗನ ಮಹಲ್ ಆವರಣದಲ್ಲಿ ನಡೆಯಿತು.

ಪ್ರಾಥಮಿಕ ವಿಭಾಗ, ಹೈಸ್ಕೂಲು ವಿಭಾಗ ಹಾಗೂ ಪಿಯು ಕಾಲೇಜು ವಿಭಾಗ ಒಟ್ಟು ಮೂರು ವಿಭಾಗಗಳಲ್ಲಿ ನಡೆದ ಈ ಸ್ಪರ್ಧೆಯಲ್ಲಿ ಸುಮಾರು 400 ವಿದ್ಯಾರ್ಥಿಗಳು ಪಾಲ್ಗೊಂಡರು. ವಿದ್ಯಾರ್ಥಿಗಳಿಗಿಂತ ವಿದ್ಯಾರ್ಥಿನಿಯರು ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಂಡಿದ್ದು ಗಮನ ಸೆಳೆಯಿತು.

ಹೆರಿಟೇಜ್ ರನ್ 21 ಕಿ.ಮೀ.ಓಟದಲ್ಲಿ ಪಾಲ್ಗೊಳ್ಳುವ ಕ್ರೀಡಾಪಟುಗಳು ಓಡುವ ವಿಜಯಪುರ ನಗರದಲ್ಲಿರುವ ಪ್ರಾಚೀನ ಸ್ಮಾರಕಗಳಾದ ಗೋಳಗುಮ್ಮಟ, ಸುಂದರೇಶ್ವರ ಮಂದಿರ, ಗಗನ ಮಹಲ್, ಶ್ರೀ ನರಸಿಂಹ ದೇವಸ್ಥಾನ, ಬಾರಾಕಮಾನ, ಇಬ್ರಾಹಿಂ ರೋಜಾ, ಶಿಕ್ಷಣ ಸಂಸ್ಥೆಗಳಾದ ಸೈನಿಕ ಶಾಲೆ, ಬಿ.ಎಲ್.ಡಿ.ಇ ಸಂಸ್ಥೆ ಶಾಲೆಗಳು, ಜ್ಞಾನಯೋಗಾಶ್ರಮ ಹಾಗೂ ವಿಜಯಪುರ ನಗರದೇವತೆ ಶ್ರೀ ಸಿದ್ಧೇಶ್ವರ ದೇವಸ್ಥಾನ ಸ್ಮಾರಕಗಳ ಮಹತ್ವ ಸಾರುವ ಚಿತ್ರಗಳನ್ನು ಬಿಡಿಸುವ ವಿಷಯವನ್ನು ನೀಡಲಾಗಿತ್ತು.

ಕೈಯಲ್ಲಿ ಕುಂಚ ಮತ್ತು ಬಣ್ಣ ಹಿಡಿದು ಬಿಳಿಯ ಹಾಳೆಯ ಮೇಲೆ ತಮಗೆ ಇಷ್ಟವಾದ ಸ್ಮಾರಕಗಳನ್ನು ಅಂದವಾಗಿ ಬಿಡಿಸಿದ ಮಕ್ಕಳ ಚಿತ್ರಗಳು ಚಂದವಾಗಿದ್ದವು. ವಿಜಯಪುರ ನಗರದ ನಾನಾ ಶಾಲೆ ಕಾಲೇಜುಗಳು ಸೇರಿದಂತೆ ಗ್ರಾಮೀಣ ಭಾಗದಿಂದ ಆಗಮಿಸಿದ್ದ ವಿದ್ಯಾರ್ಥಿಗಳು ಅತ್ಯುತ್ಸಾಹದಿಂದ ಈ ಸ್ಪರ್ಧೆಯ.ಲ್ಲಿ ಪಾಲ್ಗೋಂಡರು.

ಈ ಕುರಿತು ಮಾತನಾಡಿದ ಡಾ. ಮಹಾಂತೇಶ ಬಿರಾದಾರ, ವಿಜಯಪುರ ಜಿಲ್ಲೆಯ ಮಕ್ಕಳಲ್ಲಿ ಬಾಲ್ಯದಿಂದಲೇ ಪರಿಸರ, ಕ್ರೀಡೆ, ಪ್ರಾಚೀನ ಸ್ಮಾರಕಗಳು, ಪ್ರವಾಸಿ ತಾಣಗಳ ಮಹತ್ವದ ಬಗ್ಗೆ ಜಾಗೃತಿ ಮೂಡಿಸಲು ಈ ಬಾರಿ ಎರಡು ವಿಶೇಷ ಸ್ಪರ್ಧೆ ಆಯೋಜಿಸಲಾಗಿದೆ. ಚಿತ್ರ ಬಿಡಿಸುವ ಸ್ಪರ್ಧೆ ಈಗ ನಡೆಯುತ್ತಿದ್ದು, ಮುಂಬರುವ ರವಿವಾರ ನಿಬಂಧ ಸ್ಪರ್ಧೆ ಆಯೋಜಿಸಲಾಗಿದೆ. ಕೋಟಿವೃಕ್ಷ ಅಭಿಯಾನ ತಂಡ ವಿಶೇಷ ಮುತುವರ್ಜಿ ವಹಿಸಿ ಈ ಸ್ಪರ್ಧೆ ಆಯೋಜಿಸಿದೆ ಎಂದು ತಿಳಿಸಿದರು.

ಸುಲೋಚನಾ ರಾಜಕುಮಾರ ಕುಮಾನಿ ಮಾತನಾಡಿ, ವೃಕ್ಷಥಾನ್ ಅಂಗವಾಗಿ ಚಿತ್ರ ಬಿಡಿಸುವ ಸ್ಪರ್ಧೆ ಆಯೋಜಿಸಿರುವುದು ಸ್ತುತ್ಯಾರ್ಹವಾಗಿದೆ. ಇಂದು ಮಕ್ಕಳು ಮೊಬೈಲ್, ಟ್ಯಾಬ್ ನಲ್ಲಿ ಬ್ಯೂಸಿಯಾಗಿರುತ್ತಾರೆ. ಇಂಥ ಸ್ಪರ್ಧೆ ಆಯೋಜಿಸಿರುವುದರಿಂದ ಮಕ್ಕಳಲ್ಲಿ ಹುದುಗಿರುವ ಪ್ರತಿಭೆಯನ್ನು ಹೊರಹಾಕಲು ಒಂದು ವೇದಿಕೆ ಒದಗಿಸಿದಂತಾಗಿದೆ. ಶಾಲೆಯ ಮಕ್ಕಳು ಕೂಡ ಇಲ್ಲಿ ಅತ್ಯುತ್ಸಾಹದಿಂದ ಪಾಲ್ಗೊಂಡಿದ್ದಾರೆ. ಮಕ್ಕಳಿಗಾಗಿ ಇಂಥ ಬೇರೆ ಬೇರೆ ಸ್ಪರ್ಧೆಗಳನ್ನು ಇನ್ನೂ ಹೆಚ್ಚೆಚ್ಚು ಆಯೋಜಿಸಬೇಕು ಎಂದು ಹೇಳಿದರು.

ಒಂದನೇ ತರಗತಿ ವಿದ್ಯಾರ್ಥಿನಿ ಪ್ರಕೃತಿ ಬಿರಾದಾರ ಮಾತನಾಡಿ, ಸ್ಪರ್ಧೆಯಲ್ಲಿ ಭಾಗವಹಿಸಿರುವುದು ತುಂಬಾ ಖುಷಿ ತಂದಿದೆ. ಇಲ್ಲಿ ಬಹಳಷ್ಟು ಮಕ್ಕಳನ್ನು ಕಂಡು ನನಗೆ ಬಹಳ ಆನಂದವಾಗಿದೆ. ನಾನು ಪ್ರಾಚೀನ ಸ್ಮಾರಕದ ಚಿತ್ರವನ್ನು ಬಿಡಿಸಿದ್ದೇನೆ ಎಂದು ಹೇಳಿದಳು.

ಕಾರ್ಯಕ್ರಮ ನಿರ್ವಹಿಸಿದ ಅಮೀತ ಬಿರಾದಾರ, ಶಿವು ಕುಂಬಾರ ಮತ್ತು ರಮೇಶ ಬಿರಾದಾರ ಮಾತನಾಡಿ, ಮಕ್ಕಳಿಗೆ ಚಿತ್ರ ಬಿಡಿಸಲು ಒಟ್ಟು ಎರಡು ಗಂಟೆಗಳ ಕಾಲಾವಕಾಶ ನೀಡಲಾಗಿತ್ತು.






Owner, Editor, Printerd,and published, :-Owner - sidramayya swamy devi colony bidar - 585401, Editor-sidramayya swamy devi colony bidar, Printed at Sri sai offset printer's H.NO : 8-9-416/1 devi colony bidar - 585401 Published at H.NO:8-9-416/1 devi colony Bidar - 585401